ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ 355ನೇ ಆರಾಧಾನಾ ಮಹೋತ್ಸವ ಪ್ರಯುಕ್ತ ಸೋಮವಾರ ಉತ್ತರಾರಾಧನೆ ಅದ್ದೂರಿಯಾಗಿ ಜರುಗಿತು.


01 ಸೆಪ್ಟೆಂಬರ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -170 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629





ಈ ಕಪ್ಪು ಸುಂದರಿ ರೊಕ್ಕದ ಬಂಗಾರಿ ! » 2





ದೇಶಾದ್ಯಂತ ಪ್ರಮಾಣಿತ ಸಮಯ ಜಾರಿಗೆ ಸಿದ್ಧತೆ » 3





ನೆರೆಯ ನೇಪಾಳಕ್ಕೆ ಭಾರತ ಸಂಪೂರ್ಣ ಬೆಂಬಲ » 4


## ಆಕಸ್ಮಿಕವಾಗಿ ಗುಂಡು ಸಿಡಿದು ಕಾಫಿ ಬೆಳೆಗಾರ ಸಾವು

• ಪ್ರಜೋದಯ ವರದಿ

**ಬೇಲೂರು:** ಜೀವ ರಕ್ಷಣೆಗಾಗಿ ಬಂದೂಕು ಹಿಡಿದುಕೊಂಡು ಕಾಫಿ ತೋಟಕ್ಕೆ ತೆರಳಿದ್ದ ವೇಳೆ ಆಕಸ್ಮಿಕವಾಗಿ ಬಂದೂಕಿನಿಂದ ಗುಂಡು ಸಿಡಿದು ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಂದಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೇಶವಶೆಟ್ಟಿ (61) ಮೃತಪಟ್ಟಿದ್ದಾರೆ.



ಗ್ರಾಮದ ಶೈಲೇಶ್ ಎಂಬುವವರ ಇಶ್ಚಿತ್ ಎಸ್ಟೇಟ್‌ನಲ್ಲಿ ಘಟನೆ ಸಂಭವಿಸಿದೆ. ಕಾಡಾನೆಗಳಿದ್ದ ಕಾರಣದಿಂದ ತಮ್ಮ ರಕ್ಷಣೆಗಾಗಿ ಬಂದೂಕಿನೊಂದಿಗೆ ಕಾಫಿ ತೋಟಕ್ಕೆ ತೆರಳಿದ್ದ ಕೇಶವಶೆಟ್ಟಿ ಅವರು ತೋಟದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆಕಸ್ಮಿಕವಾಗಿ ಗುಂಡು ಸಿಡಿದು ಗಂಭೀರವಾಗಿ ಗಾಯಗೊಂಡಿದ್ದಾರೆ. ಬಳಿಕ ಕೇಶವಶೆಟ್ಟಿ ಅವರು ಘಟನಾ ಸ್ಥಳದಿಂದ ಸುಮಾರು 300 ಮೀಟರ್ ದೂರದವರೆಗೆ ನಡೆದುಕೊಂಡು ಬಂದ ಬಳಿಕ ಮೃತಪಟ್ಟಿದ್ದಾರೆ.

ಮೃತ ದೇಹವನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಹಾಗು ಸೋಕೋ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಿಜೆಪಿ ವಿರುದ್ಧ ಕುಮಾರಸ್ವಾಮಿ ಹೋರಾಟ

### ಕೆಪಿಎಸ್‌ಸಿ ಹಗರಣ ತಿಕ್ಕಾಟ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು

• ಪ್ರಜೋದಯ ವರದಿ

**ಬೆಂಗಳೂರು:** ಕೆಪಿಎಸ್‌ಸಿ ಹಗರಣ ವಿಚಾರವಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ನಡುವೆ ತಿಕ್ಕಾಟ ತೀವ್ರಗೊಂಡಿದ್ದು, ಕುಮಾರಸ್ವಾಮಿ ಅವರು ನಮ್ಮ ವಿರುದ್ಧ ಅಲ್ಲ, ಬಿಜೆಪಿ ವಿರುದ್ಧ ಹೋರಾಟ ಮಾಡುತ್ತಿದ್ದಾರೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಇರಬಾರದೆಂದು ಕುಮಾರಸ್ವಾಮಿ ತೀರ್ಮಾನಿಸಿದ್ದಾರೆ. ಕೆಪಿಎಸ್‌ಸಿ ಹಗರಣದಲ್ಲಿ ಸರ್ಕಾರ ಭಾಗಿಯಾಗಿದೆ ಎಂದು ಕುಮಾರಸ್ವಾಮಿ ಹೇಳಿದ್ದು, ಮತ್ತೊಂದೆಡೆ ಅವರ ಮೈತ್ರಿ ನಾಯಕರೊಬ್ಬರ ಬಂಧನವಾಗಿದೆ ಎಂದರು.

**ಬಿಜೆಪಿಯಲ್ಲಿ ಆಂತರಿಕ ಕಲಹ**

ಕೆಪಿಎಸ್‌ಸಿ ಹಗರಣದ ತನಿಖೆಯಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಮಾಹಿತಿ ಪಡೆಯುತ್ತೇನೆ. ಬಿಜೆಪಿಯಲ್ಲಿ ಆಂತರಿಕ ಕಲಹ ನಡೆಯುತ್ತಿದೆ. ಕೆಪಿಎಸ್‌ಸಿಗೆ ಅಧ್ಯಕ್ಷ ಹಾಗು ಕಾರ್ಯದರ್ಶಿಗಳ ನೇಮಕ ಮಾಡಿದವರು ಯಾರು, ಸಂಪೂರ್ಣ ವರದಿ ಬರುವವರೆಗೂ ನಾನು ಮಾಹಿತಿ ಬಹಿ



ರಂಗಪಡಿಸಲು ಸಾಧ್ಯವಿಲ್ಲ. ಯಾರು ಏನೇನು ಮಾತನಾಡುತ್ತಾರೋ ಮಾತಾಡಲಿ. ಅವರಿಗೆ ಕಾಲವೇ ಉತ್ತರಿಸುತ್ತದೆ ಎಂದು ತಿಳಿಸಿದರು.

ಬಿಜೆಪಿ ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿ, ಪಾದಯಾತ್ರೆ ಮಾಡಲಿ, ಆನಂತರ ನಮ್ಮದು ಯಾವ ಯಾತ್ರೆ ನಡೆಯುತ್ತದೆ ಎಂದು ಹೇಳುವೆ. ನಾವು ರಾಜಕಾರಣಿಗಳಲ್ಲವೇ ಅವರು ಶುರು ಮಾಡಲಿ. ನಾವು ಅವರಿಗೆ ಗೌರವ ಕೊಟ್ಟು ಅಧಿವೇಶನ ನಡೆಸಿದ್ದೆವು. ಯಾವುದೇ ವಿಚಾರ ಚರ್ಚೆ ಮಾಡಲಿಲ್ಲ. ಈಗ ಕಸ್ತೂರಿ ರಂಗನ್ ವರದಿ, ರೈತರ ಹಿತ ವಿಚಾರವಾಗಿ ಚರ್ಚೆ ಮಾಡಬೇಕಿದೆ. ಅದಕ್ಕಾಗಿ ಶಾಸಕರ ಅಭಿಪ್ರಾಯ ಕೇಳಲಾಗುವುದೆಂದು ತಿಳಿಸಿದರು.

**ಕಾನೂನು ಪ್ರಕಾರ ಭೂ ಗ್ಯಾರಂಟಿ**

ಸರ್ಕಾರದ ಆರನೇ ಭೂ ಗ್ಯಾರಂಟಿ ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ. ಸರ್ಕಾರಕ್ಕಾಗಿ ತಮ್ಮ ಆಸ್ತಿಯನ್ನು ತ್ಯಾಗ ಮಾಡುವ ಎಲ್ಲರಿಗೂ ಇದು ಅನ್ವಯವಾಗಲಿದೆ. ಅವರ ಹೆಸರುಗಳನ್ನು ಶಾಶ್ವತವಾಗಿ ದಾಖಲಿಸಬೇಕು. ಅವರಿಗೆ ಸೂಕ್ತ ಪರಿಹಾರ ನೀಡಬೇಕು. ಅಲ್ಲದೆ, ಅವರು


» ನಾಲ್ಕನೇ ಪುಟದಲ್ಲಿ


**ಸಚಿವರ ಪಾತ್ರದ ಬಗ್ಗೆ ತನಿಖೆಯಾಗಲಿ: ಹೆಚ್.ಡಿ.ಕೆ.**

ಕೆಪಿಎಸ್‌ಸಿ ಅಕ್ರಮ ಜಗಜ್ಜಾಹೀರಾಗಿದ್ದರೂ ಸರ್ಕಾರ ಸೂಕ್ತ ತನಿಖೆ ನಡೆಸದೆ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡುತ್ತಿದೆ. ಪ್ರಕರಣದ ಪ್ರಮುಖ ಆರೋಪಿ ಜ್ಞಾನೇಂದ್ರ ಕುಮಾರ್‌ನನ್ನು ಇ.ಡಿ. ತನಿಖೆಯಿಂದ ರಕ್ಷಿಸಲು ದೇವನಹಳ್ಳಿಯ ರೆಸಾರ್ಟ್‌ನಲ್ಲಿಟ್ಟು ರಾಜಾತಿಥ್ಯ ನೀಡಲಾಗಿತ್ತು ಹಾಗು ಆತ ಸಿಐಡಿಗೆ ಶರಣಾಗಿದ್ದರೂ ಉತ್ತರ ಪ್ರದೇಶದಿಂದ ಬಂಧಿಸಿ ಕರೆತರಲಾಗಿದೆ ಎಂದು ಸುಳ್ಳು ಕಥೆ ಕಟ್ಟಲಾಗುತ್ತಿದೆ. ಸರ್ಕಾರ ಇನ್ನೂ ಸತ್ಯ ಮುಚ್ಚಿಡುತ್ತಿದ್ದು, ಸಚಿವರ ನೇರ ಪಾತ್ರದ ಬಗ್ಗೆ ತನಿಖೆಯಾಗಲಿ ಎಂದು ದಾಖಲೆಗಳ ಸಮೇತ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

## ಸೆ.20 ರಂದು ಅರಸೀಕೆರೆ ನ್ಯಾಯಾಲಯ ಸಂಕೀರ್ಣ ಉದ್ಘಾಟನೆ

### ಅಗತ್ಯ ಸಿದ್ಧತೆಗೆ ಸಚಿವ ಕೆ.ಎಂ.ಶಿವಲಿಂಗೇಗೌಡ ಸೂಚನೆ

• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ತಾಲ್ಲೂಕು ನ್ಯಾಯಾಲಯ ಸಂಕೀರ್ಣವನ್ನು ಸೆ.20 ರಂದು ಉದ್ಘಾಟನೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ತಿಳಿಸಿದರು.

ವಿಕಾಸಸೌಧದ ಸಭಾಂಗಣದಲ್ಲಿ ಸೋಮವಾರ ಕೆ.ಎಂ.ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಅರಸೀಕೆರೆ ಹೊಸ ನ್ಯಾಯಾಲಯ ಸಂಕೀರ್ಣ ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆವರಣದಲ್ಲಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸಂಕೀರ್ಣ ಕಾಮ ಗಾರಿಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಅರಸೀಕೆರೆ ಇತಿಹಾಸದಲ್ಲೇ ಉತ್ತಮ ನ್ಯಾಯಾಲಯ ಸಂಕೀರ್ಣ ನಿರ್ಮಾಣವಾಗುತ್ತಿರುವುದು ಸಂತಸದ ವಿಚಾರ. ಸೆ.6 ರಂದು ಪೂರ್ವಭಾವಿ ಸಭೆ ನಡೆಸಿ ಉದ್ಘಾಟನಾ ಕಾರ್ಯಕ್ರಮಗಳ ಅಂತಿಮ ರೂಪುರೇಷೆಗಳನ್ನು ನಿರ್ಧರಿಸೋಣವೆಂದು ಅಧಿಕಾರಿಗಳಿಗೆ ತಿಳಿಸಿದರು.



ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ತ್ವರಿತಗತಿಯಲ್ಲಿ ಕೆಲಸಗಳನ್ನು ಮಾಡಬೇಕು. ಈಗಾಗಲೇ ಸಾಕಷ್ಟು ತಡವಾಗಿದೆ. ವಿಳಂಬ ಧೋರಣೆಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ವಿದ್ಯುತ್ ಸಂಪರ್ಕ, ಶೌಚಾಲಯ ಸೇರಿ ಮೂಲಭೂತ ಸೌಕರ್ಯಗಳ ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು. ಗುತ್ತಿಗೆದಾರರ ಸಮಸ್ಯೆ ಬಗೆಹರಿಸಲು ಸಿದ್ಧನಿದ್ದೇನೆ ಎಂದರು.

ಉದ್ಘಾಟನೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಸಿದ್ಧತೆ ನಡೆಸಿ, ಅಗತ್ಯ ಸಹಕಾರ ನೀಡಲು ಸಿದ್ಧನಿದ್ದೇನೆ. ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ನಡೆಸಬೇಕೆಂದು ನಿರ್ದೇಶನ ನೀಡಿದರು. ನ್ಯಾಯಮೂರ್ತಿಗಳನ್ನು ಗೌರವದಿಂದ ನಡೆಸಿಕೊಳ್ಳಬೇಕು. ನ್ಯಾಯಮೂರ್ತಿಗಳಿಗೆ ಆಭಾಸವಾಗದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಬೇಕೆಂದರು.

ಇದೇ ವೇಳೆ ಹಾಸನ ಜಿಲ್ಲೆಯ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆದ್ಯತೆ ನೀಡಿದ್ದೇನೆ. ಪ್ರಮುಖವಾಗಿ ವಿಮಾನ ನಿಲ್ದಾಣ, ಜಿಲ್ಲಾಧಿಕಾರಿ ಕಚೇರಿ ಉದ್ಘಾಟನೆ ಮತ್ತಿತರ ಮಹತ್ವದ ಕಾರ್ಯಕ್ರಮಗಳನ್ನು ನಡೆಸುವ ನಿಟ್ಟಿನಲ್ಲಿ ಗಮನ ಹರಿಸಬೇಕಿದೆ ಎಂದರು. ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ನ್ಯಾಯವಾದಿಗಳ ಪ್ರತಿನಿಧಿಗಳು ಸೇರಿ ಅಧಿಕಾರಿಗಳು ಹಾಜರಿದ್ದರು.

## ಜಾತ್ರಾ ಮಹೋತ್ಸವದ ವಿಚಾರಕ್ಕೆ ಮಾರಾಮಾರಿ

■ ಶಿವಲಿಂಗೇಗೌಡ–ಎನ್.ಆರ್. ಸಂತೋಷ್ ಬಣಗಳ ನಡುವೆ ಗಲಾಟೆ: ಆರು ಮಂದಿಗೆ ಗಾಯ



• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಜಾತ್ರಾ ಮಹೋತ್ಸವ ನಡೆಸುವ ವಿಚಾರವಾಗಿ ಎರಡು ಗುಂಪುಗಳ ನಡುವೆ ನಡೆದ ವಾಗ್ವಾದ ಮಾರಾಮಾರಿಗೆ ತಿರುಗಿ, ಪರಸ್ಪರ ದೊಣ್ಣೆ ಹಾಗು ಕಲ್ಲುಗಳಿಂದ ಹೊಡೆದಾಡಿಕೊಂಡಿರುವ ಘಟನೆ ತಾಲ್ಲೂಕಿನ ಸೈದರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದು, ಗಲಾಟೆ ವೇಳೆ ಒಂದು ಮನೆಯ ಮೇಲೆ ಕಲ್ಲು ತೂರಾಟ ನಡೆಸಿ ಕಿಟಿಕಿಗಳ ಗಾಜುಗಳನ್ನು ಒಡೆದು ಜಖಂಗೊಳಿಸಲಾಗಿದೆ. ಗಾಯಾಳುಗಳನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಗ್ರಾಮದಲ್ಲಿ ಜಾತ್ರಾ ಮಹೋತ್ಸವ ನಡೆಸುವ ಕುರಿತು ಗ್ರಾಮದ ಮುಖಂಡ ನಂಜುಂಡಸ್ವಾಮಿ ನೇತೃತ್ವದಲ್ಲಿ ವ್ರಾತ್ಂಕತೆ ನ'ಡ'ಯ೦೦ ತ್ತಿತ್ತು. ಈ ವೇಳೆ ಅಲ್ಲಿಗೆ ಗ್ರಾಮದ ಸಿದ್ದೇಶ್, ಸರ್ವೇಶ್ ಹಾಗು ಸ್ವಾಮಿ ಎಂಬುವವರು ಬಂದು ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ನಂಜುಂಡಸ್ವಾಮಿ ಅವರ ತೀರ್ಮಾನಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಈ ವಿಚಾರವಾಗಿ ಎರಡೂ ಕಡೆಯವರ ನಡುವೆ ಮಾತಿನ ಚಕಮಕಿ ಆರಂಭವಾಗಿದ್ದು, ಕೆಲವೇ ಕ್ಷಣಗಳಲ್ಲಿ ವಾಗ್ವಾದ ವಿಕೋಪಕ್ಕೆ ತಿರುಗಿದೆ. ಬಳಿಕ ಎರಡೂ ಗುಂಪಿನವರು ದೊಣ್ಣೆ ಹಾಗೂ ಕಲ್ಲುಗಳಿಂದ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಗಲಾಟೆ ಆರಂಭವಾಗುತ್ತಿದ್ದಂತೆ ಗ್ರಾಮದಲ್ಲಿದ್ದ ಮಹಿಳೆಯರು, ಮಕ್ಕಳು ಹಾಗು ಇತರೆ ಗ್ರಾಮಸ್ಥರು ಭಯಭೀತರಾಗಿ ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಇದೇ ವೇಳೆ ಒಂದು ಗುಂಪಿನವರು ಗ್ರಾಮದ ಮನೆಯೊಂದರ ಮೇಲೆ ಕಲ್ಲು ತೂರಾಟ ನಡೆಸಿದ್ದು, ಮನೆಯ ಕಿಟಿಕಿಗಳು ಸೇರಿ ಕೆಲ ಭಾಗಗಳು ಜಖಂಗೊಂಡಿವೆ.

ನಂಜುಂಡಸ್ವಾಮಿ ಅವರು ಅಬಕಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಬೆಂಬಲಿಗರಾಗಿದ್ದು, ಮತ್ತೊಂದೆಡೆ ಸಿದ್ದೇಶ್, ಸರ್ವೇಶ್ ಹಾಗು ಸ್ವಾಮಿ ಅವರು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರ ಬೆಂಬಲಿಗರು ಎನ್ನಲಾಗಿದೆ. ಈ ಹಿನ್ನಲೆ ಜಾತ್ರಾ ಮಹೋತ್ಸವದ ವಿಚಾರದ ಜೊತೆಗೆ ರಾಜಕೀಯ ಭಿನ್ನಾಭಿಪ್ರಾಯವೂ ಕಾರಣವಾಗಿದೆ ಎನ್ನಲಾಗಿದೆ.


» ನಾಲ್ಕನೇ ಪುಟದಲ್ಲಿ


# ವಾಸ್ತವ ವರದಿ ಸಲ್ಲಿಸಲು ಅಧಿಕಾರಿಗಳು–ಜನಪ್ರತಿನಿಧಿ ವಿಫಲ

### ಬೇಲೂರು ತಾಲ್ಲೂಕು ಬರಪೀಡಿತ ಪಟ್ಟಿಗೆ ಸೇರಿಸಲು ಬಿ.ಶಿವರಾಮ್ ಒತ್ತಾಯ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನಲ್ಲಿ ಮಳೆ ಪ್ರಮಾಣ, ಬೆಳೆ ಪರಿಸ್ಥಿತಿ ಹಾಗು ರೈತರ ಸಂಕಷ್ಟಕ್ಕೆ ಸಂಬಂಧಿಸಿದ ವಾಸ್ತವ ಅಂಕಿ-ಅಂಶಗಳನ್ನು ಸಮರ್ಪಕವಾಗಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಲ್ಲಿ ಅಧಿಕಾರಿಗಳು ಹಾಗು ಜನಪ್ರತಿನಿಧಿಗಳು ವಿಫಲರಾಗಿದ್ದಾರೆಂದು ಮಾಜಿ ಸಚಿವ ಬಿ. ಶಿವರಾಮ್ ಅವರು ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೆ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಪ್ರಮುಖ ವಾಣಿಜ್ಯ ಬೆಳೆ ಕಾಫಿ ಸೇರಿ ವಿವಿಧ ಬೆಳೆಗಳ ಇಳುವರಿ ಕುಸಿದಿದ್ದು, ಮಳೆ ಕೊರತೆ, ನೀರಿನ ಸಮಸ್ಯೆ ಹಾಗು ಕೃಷಿ ವೆಚ್ಚ ಹೆಚ್ಚಳದಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಧಿಕಾರಿಗಳು ಕಚೇರಿಯಲ್ಲಿರುವ ದಾಖಲೆಗಳ ಅಂಕಿ–ಅಂಶಗಳಿಗೆ ಮಾತ್ರ ಸೀಮಿತವಾಗಿದ್ದಾರೆ.



ಗ್ರಾಮಗಳಿಗೆ ತೆರಳಿ ಬೆಳೆ ನಷ್ಟ, ಮಳೆಯ ಪ್ರಮಾಣ, ಜಲಮೂಲಗಳ ಸ್ಥಿತಿ, ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳ ಮೇವಿನ ಪರಿಸ್ಥಿತಿ ಸೇರಿ ರೈತರ ನೈಜ ಸಂಕಷ್ಟವನ್ನು ಪರಿಶೀಲಿಸಬೇಕು. ಗ್ರಾಮವಾರು ಸಮೀಕ್ಷೆ ನಡೆಸಿ ನಿಖರ ಅಂಕಿ–ಅಂಶಗಳೊಂದಿಗೆ ವಾಸ್ತವ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಬೇಕೆಂದು ಒತ್ತಾಯಿಸಿದರು.

ಜನಪ್ರತಿನಿಧಿಗಳು ಕೂಡ ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರದ ಮೇಲೆ ಒತ್ತಡ ಹೇರಬೇಕು. ತಾಲ್ಲೂಕಿನಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಮರು ಪರಿಶೀಲಿಸಿ ಕೂಡಲೇ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ರೈತರಿಗೆ ಬೆಳೆ ನಷ್ಟ ಪರಿಹಾರ, ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಸೇರಿ ಅಗತ್ಯ ಪರಿಹಾರ ಹಾಗೂ ಸೌಲಭ್ಯಗಳನ್ನು ತುರ್ತಾಗಿ ಒದಗಿಸಬೇಕು ಎಂದರು.

ಕಾಫಿ ಬೆಳೆಗಾರರ ಪರಿಸ್ಥಿತಿಯೂ ಗಂಭೀರವಾಗಿದೆ. ಕಾಫಿ ತೋಟಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವುದು ಹಾಗು ಹವಾಮಾನ ವೈಪರೀತ್ಯದಿಂದ ಬೆಳೆಗಾರರು ತೊಂದರೆ ಅನುಭವಿಸುತ್ತಿದ್ದಾರೆ. ಆದರೆ, ತಾಲ್ಲೂಕಿನ ನೈಜ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸರ್ಕಾರದ ಗಮನಕ್ಕೆ ತರುವಲ್ಲಿ ಸಂಬಂಧಪಟ್ಟವರು ಅಗತ್ಯ ಕ್ರಮ ಕೈಗೊಂಡಿಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರು ಸೇರಿ ಕೃಷಿ ಅವಲಂಬಿತ ಕುಟುಂಬಗಳು ಸಂಕಷ್ಟದಲ್ಲಿವೆ. ಈ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಮತ್ತಷ್ಟು ವಿಳಂಬ ಮಾಡದೆ ಮಧ್ಯ ಪ್ರವೇಶಿಸಿ ಪರಿಹಾರ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರದಿಂದಲೂ ವಿಶೇಷ ಪರಿಹಾರ ಪ್ಯಾಕೇಜ್ ಹಾಗು ಅಗತ್ಯ ಅನುದಾನವನ್ನು ಬಿಡುಗಡೆ ಮಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದ್ದು, ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ತಾಲ್ಲೂಕಿನ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವುದಾಗಿ ತಿಳಿಸಿದರು.

ಬರ ಪರಿಸ್ಥಿತಿಯ ನೈಜ ಚಿತ್ರಣವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದಿದ್ದರೆ ಮುಂದಿನ ದಿನಗಳಲ್ಲಿ ರೈತರ ಸಂಕಷ್ಟ ಮತ್ತಷ್ಟು ಉಲ್ಬಣಿಸಲಿದೆ. ಕೂಡಲೇ ಗ್ರಾಮವಾರು ಸಮೀಕ್ಷೆ ನಡೆಸಿ ನಿಖರ ವರದಿ ಸಿದ್ಧಪಡಿಸಿ ರೈತರಿಗೆ ತುರ್ತು ಪರಿಹಾರ ಕಲ್ಪಿಸಬೇಕು. ಈ ಸಂಬಂಧ ಸರ್ಕಾರದ ಗಮನ ಸೆಳೆಯಲು ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡುವುದಾಗಿ ತಿಳಿಸಿದರು.

**ನನ್ನ ವಿರುದ್ಧ ದಾಖಲೆಗಳಿದ್ದರೆ ಬಹಿರಂಗಪಡಿಸಲಿ**

ನನ್ನ 30 ವರ್ಷಗಳ ರಾಜಕೀಯ ಜೀವನದಲ್ಲಿ ಯಾರಿಂದಲೂ ಒಂದು ರೂಪಾಯಿ ಲಂಚ ಪಡೆದಿಲ್ಲ. ನಾನು ಲಂಚ ಪಡೆದಿದ್ದೇನೆಂಬುದಕ್ಕೆ ದಾಖಲೆಗಳಿದ್ದರೆ ಬಹಿರಂಗಪಡಿಸಲಿ. ದಾಖಲೆಗಳೊಂದಿಗೆ ಆರೋಪ ಮಾಡಿದರೆ ಬಹಿರಂಗ ಚರ್ಚೆಗೆ ನಾನು ಸಿದ್ಧ. ಶಾಸಕ ಹೆಚ್.ಕೆ. ಸುರೇಶ್ ಅವರ ರಾಜಕೀಯ ನಡೆ ಹಾಗು ಪಕ್ಷ ನಿಷ್ಠೆಯ ಬಗ್ಗೆ ತಮ್ಮ ಬಳಿ ಸಾಕಷ್ಟು ಮಾಹಿತಿ ಇದೆ. ನನ್ನ ವಿರುದ್ಧ ಮಾಡಿರುವ ಆರೋಪಗಳಿಗೆ ದಾಖಲೆಗಳಿದ್ದರೆ ಕಾನೂನು ಹೋರಾಟ ನಡೆಸಲಿ ಎಂದು ಬಿ.ಶಿವರಾಮ್ ಅವರು ಸವಾಲು ಹಾಕಿದರು.

## ಗ್ರಾ.ಪಂ. ಮೀಸಲಾತಿ ಸರಿಪಡಿಸಲು ಶಾಸಕ ಬಾಲಕೃಷ್ಣ ಆಗ್ರಹ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ರಾಮ ಪಂಚಾಯಿತಿ ಮೀಸಲಾತಿ ಅವೈಜ್ಞಾನಿಕವಾಗಿದ್ದು, ತಾಲ್ಲೂಕಿನ 25ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಜಾತಿವಾರು ಪ್ರಾತಿನಿಧ್ಯ ಪರಿಗಣಿಸದೆ ಲೋಪ ಎಸಗಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ದೂರಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಗೌಡಗೆರೆ, ಯಾಳನಹಳ್ಳಿ, ಕರಿಮಾರನಹಳ್ಳಿ, ಗೋವಿನಕೆರೆ, ಹಿರೀಸಾವೆ, ಮಂಚೇನಹಳ್ಳಿ, ಜಿನ್ನೇನಹಳ್ಳಿ, ಕಾಮನಾಯಕನಹಳ್ಳಿ, ನುಗ್ಗೇಹಳ್ಳಿ, ಬಾಗೂರು ಸೇರಿ ಅನೇಕ ಗ್ರಾಮಗಳಲ್ಲಿ ಮೀಸಲಾತಿ ನಿಗದಿ



ಯಲ್ಲಿ ಲೋಪವಾಗಿದೆ. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಈಗಾಗಲೇ ಈ ಬಗ್ಗೆ ಪ್ರಶ್ನೆ ಮಾಡಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಲೋಪವಾಗಿರುವುದು ಕಂಡುಬಂದಿದೆ. ಜಿಲ್ಲಾಧಿಕಾರಿ ಮೀಸಲಾತಿ ಪ್ರಕಟಕ್ಕೂ ಮೊದಲು ಮೀಸಲಾತಿ ಲೋಪವಾಗದಂತೆ ಚರ್ಚಿಸಲು ಹಾಸನದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಭೆ ಕರೆಯಬೇಕಿತ್ತು. ಈಗಲೂ ಕಾಲ ಮಿಂಚಿಲ್ಲ. ಜಿಲ್ಲಾಧಿಕಾರಿ, ರಾಜ್ಯ ಚುನಾವಣಾ ಆಯೋಗದ ಗಮನಕ್ಕೆ ತಂದು ಮೀಸಲಾತಿ ನೀತಿ ಸರಿಪಡಿಸಬೇಕೆಂದು ಆಗ್ರಹಿಸಿದರು.

ಕಳೆದ ಮೂರು ವರ್ಷಗಳಿಂದ ರೈತರ ಆತ್ಮಹತ್ಯೆಗೆ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಜಿಲ್ಲೆಯಲ್ಲಿ 124 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ತಾಲ್ಲೂಕಿನಲ್ಲಿ 13 ಪ್ರಕರಣಗಳಿವೆ. ಜಿಲ್ಲಾಧಿಕಾರಿ ರೈತ ಸಂಜೀವಿನಿಯಡಿ ಶೀಘ್ರ ಪರಿಹಾರ ಒದಗಿಸಬೇಕೆಂದರು.

ಪರಿಶಿಷ್ಟ ಜಾತಿಯಲ್ಲಿ ಅಂತರ್ಜಾತಿ ವಿವಾಹವಾದವರಿಗೆ 2024– 27ರ ವರೆಗೆ 127 ಪ್ರಕರಣಗಳಿಂದ 3.84 ಕೋ.ರೂ. ಪ್ರೋತ್ಸಾಹ ಧನ ಬಿಡುಗಡೆಯಾಗಿಲ್ಲ. ಅದೇ ರೀತಿ ಪರಿಶಿಷ್ಟ ಪಂಗಡದಲ್ಲಿ 34 ಪ್ರಕರಣಗಳಿಗೆ ಸಂಬಂಧಿಸಿ 1.02 ಕೋ.ರೂ. ಪ್ರೋತ್ಸಾಹ ಧನ ಬಾಕಿ ಇದ್ದು


» ನಾಲ್ಕನೇ ಪುಟದಲ್ಲಿ


## ಇಂದು ದಿವ್ಯ ಸಂಜೆ ಸಂವಾದ

• ಪ್ರಜೋದಯ ವರದಿ

**ಹಾಸನ:** ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಸುವರ್ಣ ಮಹೋತ್ಸವ ಅಂಗವಾಗಿ ಸೆ.1ರ ಸಂಜೆ 5.30ಕ್ಕೆ ನಗರ ಹೊರವಲಯದ ನಂದ ಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ದಿವ್ಯ ಸಂಜೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಒಂದು ಜಗತ್ತು ಒಂದು ಕುಟುಂಬ ಅಭಿಯಾನದ ಸಂಸ್ಥಾಪಕ ಮಧುಸೂದನ ಸಾಯಿ ಅವರೊಂದಿಗೆ ಸ್ನೇಹಪರ ಸಂಭಾಷಣೆ ನಡೆಯಲಿದೆ. ಪತ್ರಕರ್ತ ಸುದರ್ಶನ್ ಚನ್ನಂಗಿಹಳ್ಳಿ ಸಂವಾದ ನಡೆಸಿಕೊಡಲಿದ್ದಾರೆ.

## ವಿದ್ಯುತ್ ತಂತಿ ತಗುಲಿ ಕಾಡಾನೆ ಸಾವು

• ಪ್ರಜೋದಯ ವರದಿ

**ಬೇಲೂರು :** ತುಂಡಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಹೆಣ್ಣಾನೆಯೊಂದು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕೋಗಿಲೆ ಮನೆ ಗ್ರಾಮದ ಸಮೀಪ ನಡೆದಿದೆ.

ಗ್ರಾಮದ ಶಶಿ ಎಂಬುವವರ ಜಮೀನಿನಲ್ಲಿ ವಿದ್ಯುತ್ ತಂತಿ ತುಂಡಾಗಿ ನೆಲಕ್ಕೆ ಬಿದ್ದಿತ್ತು. ಭಾನುವಾರ ರಾತ್ರಿ ಕಾಡಾನೆಗಳ ಹಿಂಡು ಈ ಜಮೀನಿನ ಮೂಲಕ ಸಂಚರಿಸುತ್ತಿದ್ದಾಗ ಆನೆಯ ಸೊಂಡಿಲಿಗೆ ವಿದ್ಯುತ್ ತಂತಿ ತಗುಲಿದ ಪರಿಣಾಮ ವಿದ್ಯುತ್ ಪ್ರವಹಿಸಿ ಹೆಣ್ಣಾನೆ ಸ್ಥಳದಲ್ಲೇ ಮೃತಪಟ್ಟಿದೆ.



ಸೋಮವಾರ ಬೆಳಿಗ್ಗೆ ಸ್ಥಳೀಯರು ಕಾಡಾನೆ ಮೃತಪಟ್ಟಿರುವುದನ್ನು ಗಮನಿಸಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಮತ್ತು ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದು, ವಿದ್ಯುತ್ ಇಲಾಖೆಯ ನಿರ್ಲಕ್ಷ್ಯವೇ ಘಟನೆಗೆ ಕಾರಣವಾಗಿದೆಯೇ ಎಂಬ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ.

ವಿದ್ಯುತ್ ತಂತಿ ತಗುಲಿ ಕಾಡಾನೆ ಮೃತಪಟ್ಟಿರುವುದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕಾಡಾನೆ–ಮಾನವ ಸಂಘರ್ಷಕ್ಕೆ ಪರಿಹಾರ ಕಲ್ಪಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

## ವಿಮಾನ ನಿಲ್ದಾಣ ಕಾಮಗಾರಿ ಪ್ರಗತಿ ಚರ್ಚೆ



• ಪ್ರಜೋದಯ ವರದಿ

**ಹಾಸನ:** ವಿಮಾನ ನಿಲ್ದಾಣ ಕಾಮಗಾರಿಯ ಪ್ರಸ್ತುತ ಪ್ರಗತಿ, ಕಾಮಗಾರಿ ಅನುಷ್ಠಾನದಲ್ಲಿ ಎದುರಾಗಿರುವ ಸಮಸ್ಯೆಗಳು ಹಾಗು ಮುಂದಿನ ಹಂತದಲ್ಲಿ ಕೈಗೊಳ್ಳಬೇಕಿರುವ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಚರ್ಚಿಸಿದರು.

ಸೋಮವಾರ ಬೆಂಗಳೂರಿನ ವಿಕಾಸಸೌಧದಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ನಗರದ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಕಾಮಗಾರಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ವಿಮಾನ ನಿಲ್ದಾಣ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೆ ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಾಮಗಾರಿಯಲ್ಲಿ ಗುಣಮಟ್ಟಕ್ಕೆ ರಾಜಿ ಮಾಡಿಕೊಳ್ಳಬಾರದು. ನಿಗದಿತ ಹಂತಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕಾಮಗಾರಿಗೆ ಸಂಬಂಧಿಸಿದಂತೆ ಎದುರಾಗಿರುವ ಸಮಸ್ಯೆಗಳನ್ನು ಅಧಿಕಾರಿಗಳು ತ್ವರಿತವಾಗಿ ಪರಿಹರಿಸಬೇಕು. ಅಗತ್ಯವಿರುವ ಅನುಮತಿ, ಭೂಮಿ ಹಾಗು ಮೂಲಸೌಕರ್ಯ ಸಂಬಂಧಿತ ಪ್ರಕ್ರಿಯೆಗಳನ್ನು ವೇಗಗೊಳಿಸಿ ಕಾಮಗಾರಿ ಸುಗಮವಾಗಿ ಸಾಗುವಂತೆ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಹಾಗು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ),ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ 341 ಸಂಘ ಸ್ಥಾಪನೆ ಗುರಿ | ಸಂಯೋಜಕರಾಗಿ ನಿಡಘಟ್ಟ ರವಿ ನೇಮಕ

# ಭಾರತ್ ಜೋಡೋ ಯುವ ಸಂಘಕ್ಕೆ 37 ಸಾವಿರ ಸದಸ್ಯರು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಯುವಜನರ ಸಬಲೀಕರಣ, ನಾಯಕತ್ವ ಗುಣ ಬೆಳೆಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಭಾರತ್ ಜೋಡೋ ಯುವ ಸಂಘ ಸ್ಥಾಪನೆಗೆ ಮುಂದಾಗಿದ್ದು, ಜಿಲ್ಲೆಯಲ್ಲಿ ಈ ವರೆಗೆ 37,812 ಸದಸ್ಯರು ನೋಂದಣಿಯಾಗಿದ್ದಾರೆ.

ಜಿಲ್ಲೆಯಾದ್ಯಂತ ಗ್ರಾಮೀಣ ಭಾಗದಲ್ಲಿ ಪಂಚಾಯಿತಿಗೆ ಒಂದರಂತೆ 261 ಹಾಗು ಪಟ್ಟಣ, ನಗರ ಭಾಗದಲ್ಲಿ 80 ಸೇರಿ 341 ಸಂಘ ಸ್ಥಾಪನೆಗೆ ನಿರ್ಧರಿಸಲಾಗಿದೆ. ಪ್ರತಿ ಸಂಘದಲ್ಲಿ 100 ಸದಸ್ಯರು ಇರಬೇಕೆಂದು ಸೂಚಿಸಲಾಗಿದೆ. ಯುವಕರಲ್ಲಿ ನಾಯಕತ್ವ ಗುಣ ಬೆಳೆಸುವುದು, ದೇಶ ಪ್ರೇಮ, ಆರೋಗ್ಯ ನೈರ್ಮಲ್ಯ, ಕ್ರೀಡೆ, ಯೋಗ, ಸಾಂಸ್ಕೃತಿಕ ಕಾರ್ಯಕ್ರಮ, ರಕ್ತದಾನ ಶಿಬಿರ, ಡಿಜಿಟಲ್ ಸಾಕ್ಷರತೆ, ಸಾಮಾಜಿಕ ಸಾಮರಸ್ಯ ಮೂಡಿಸುವ ಸ್ಪಷ್ಟ ಗುರಿಯೊಂದಿಗೆ ಕೈಗೊಂಡಿರುವ ಯೋಜನೆಯು ಫಲಪ್ರದವಾಗಬೇಕೆಂದು ಸರ್ಕಾರ ಕಟ್ಟುನಿಟ್ಟಿನ



> **ಭಾರತ್ ಜೋಡೋ ಯುವ ಸಂಘಕ್ಕೆ ಜಿಲ್ಲೆಯಲ್ಲಿ ಸದಸ್ಯತ್ವ ಪ್ರಾರಂಭಿಸಲಾಗಿದೆ. ಒಟ್ಟು 341 ಸಂಘಗಳ ಸ್ಥಾಪನೆಗೆ ಗುರಿ ಹಾಕಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಅವರು ನಿರಂತರ ಸಭೆ ನಡೆಸಿ ಮಾರ್ಗದರ್ಶನ ನೀಡಿದ್ದಾರೆ. ತಾಂತ್ರಿಕ ಕಾರಣಗಳಿಂದ ಆನ್‌ಲೈನ್ ಅರ್ಜಿ ಸ್ವೀಕಾರ ಸ್ಥಗಿತಗೊಂಡಿದ್ದು, ಶೀಘ್ರದಲ್ಲೇ ಪ್ರಾರಂಭವಾಗಲಿದೆ.**
>
> **-ಡಾ.ಡಿ.ಜಿ.ಆನಂದಮೂರ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ**

ಆದೇಶ ಹೊರಡಿಸಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಗ್ರಾಮೀಣ ಭಾಗದಲ್ಲಿ ಆನ್‌ಲೈನ್ ಮೂಲಕ 13,413, ಆಫ್‌ಲೈನ್‌ನಲ್ಲಿ 14,763, ನಗರ ವ್ಯಾಪ್ತಿಯಲ್ಲಿ ಆನ್‌ಲೈನ್‌ನಿಂದ 6,726 ಹಾಗು 2,910 ಜನರು ಆಫ್‌ಲೈನ್ ಮೂಲಕ ನೋಂದಣಿಯಾಗಿದ್ದಾರೆ.

**ಪ್ರತಿ ಸಂಘಕ್ಕೆ 10 ಲ.ರೂ.**

ಭಾರತ್ ಜೋಡೋ ಯುವ ಸಂಘಟನೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಂಭೀರವಾಗಿ ಪರಿಗಣಿಸಿದ್ದಾರೆ. ಯುವ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಸಂಘಗಳ ಕಾರ್ಯಚಟುವಟಿಕೆಗೆ ಕೋಟ್ಯಾಂತರ ರೂಪಾಯಿ ಹಣವನ್ನು ಮೀಸಲಿಡಲಾಗಿದೆ. ಪ್ರತಿ ಸಂಘಕ್ಕೆ 10 ಲ.ರೂ. ಅನುದಾನ ದೊರೆಯಲಿದೆ. ಜಿಲ್ಲಾ ಸಂಯೋಜಕರಾಗಿ ನಿಡಘಟ್ಟ ರವಿ (ಬಿಇ ವಿದ್ಯಾರ್ಹತೆ) ಅವರನ್ನು ನೇಮಿಸಲಾಗಿದೆ. ಮುಂದಿನ ಎರಡು ವರ್ಷಗಳ ಕಾಲ ಪ್ರತಿ ತಿಂಗಳು 35 ಸಾವಿರ ರೂ. ವೇತನವನ್ನು ಅವರು ಪಡೆಯುತ್ತಾರೆ. ಅದರಂತೆ ಪ್ರತಿ ಸಂಘಕ್ಕೆ 15 ಜನರ ಕಾರ್ಯಕಾರಿ ಸಮಿತಿ ರಚಿಸಲಾಗುತ್ತದೆ. ಅಧ್ಯಕ್ಷ, ಕಾರ್ಯದರ್ಶಿ ಹಾಗು ಖಜಾಂಚಿ ಹುದ್ದೆಗಳನ್ನು ಸೃಷ್ಟಿಸಲಾಗುತ್ತದೆ. ಒಟ್ಟು 10 ಲ.ರೂ. ಹಣದಲ್ಲಿ ಮೊದಲ ಕಂತು 2 ಲ.ರೂ. ಬಿಡುಗಡೆ ಆಗಲಿದ್ದು, ಅದನ್ನು ಸದಸ್ಯತ್ವ ನೋಂದಣಿ ಮತ್ತಿತರ ಕೆಲಸಗಳಿಗೆ ಬಳಸಿಕೊಳ್ಳಬಹುದು. ನಂತರ 4 ಲ.ರೂ.ನಂತೆ 2 ಕಂತುಗಳನ್ನು ಸಂಘದ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಸಂಘಗಳ ಸಭೆ ಮತ್ತು ಚಟುವಟಿಕೆಗಾಗಿ ಸ್ಥಳೀಯ ಶಾಲೆ, ಕಾಲೇಜು ಅಥವಾ ಸರ್ಕಾರಿ ಕಟ್ಟಡಗಳಲ್ಲಿ ಒಂದು ಕೊಠಡಿಯನ್ನು ಭಾರತ್ ಯುವ ಜೋಡೋ ಸಂಘಟನೆಗೆ ನೀಡಲು ನಿರ್ಧರಿಸಲಾಗಿದೆ.

ಗ್ರಾಮ ಮಟ್ಟದಲ್ಲಿ ಶಿಕ್ಷಕರು, ರಾಜಸ್ವ ನಿರೀಕ್ಷಕರು ಹಾಗು ಪಂಚಾಯಿತಿ ಮಟ್ಟದ ಗ್ರಂಥ ಪಾಲಕರನ್ನು ಮಾರ್ಗದರ್ಶಕರಾಗಿ ನೇಮಿಸಲಾಗಿದೆ. 16 ರಿಂದ 35 ವರ್ಷ ದೊಳಗಿನವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದು ಹಾಗು ಧ್ಯೇಯೋದ್ದೇಶಗಳ ಕುರಿತು ಅರಿವು ಮೂಡಿಸುವುದು ಅವರ ಕೆಲಸವಾಗಿದೆ.

ಸದ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಜಿ.ಡಿ.ಆನಂದಮೂರ್ತಿ ಅವರು ಜಿಲ್ಲಾ ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮೇಲ್ವಿಚಾರಣೆ ವಹಿಸಿದ್ದಾರೆ. ಗರಿಷ್ಠ ಪ್ರಮಾಣದಲ್ಲಿ ಸದಸ್ಯತ್ವ ಮಾಡಿಸಬೇಕೆಂಬ ನಿಟ್ಟಿನಲ್ಲಿ ಜಿಲ್ಲಾಡಳಿತ ಶತಪ್ರಯತ್ನ ನಡೆಸುತ್ತಿದೆ.

**ಆಸಕ್ತಿ ವಹಿಸದ ಜಿಲ್ಲಾ ಕಾಂಗ್ರೆಸ್**

ಸದ್ವಿಚಾರಗಳೊಂದಿಗೆ ಅಸ್ತಿತ್ವ ಪಡೆದಿರುವ ಭಾರತ್ ಜೋಡೋ ಯುವ ಸಂಘ ಬಲಗೊಳಿಸಲು ಜಿಲ್ಲಾ ಕಾಂಗ್ರೆಸ್ ಆಸಕ್ತಿ ವಹಿಸುತ್ತಿಲ್ಲ. ಇದು ಸರ್ಕಾರಿ ಯೋಜನೆಯಾಗಿದ್ದರೂ ಸಂಘಗಳಿಗೆ ನೇಮಕವಾಗುವ ಅಧ್ಯಕ್ಷ ಮತ್ತಿತರ ಪದಾಧಿಕಾರಿಗಳು ಪಕ್ಷದ ಕಾರ್ಯಕರ್ತರೇ ಆಗಿರುತ್ತಾರೆ. ಅವರ ನೆರವಿನಿಂದ ಮುಂಬರುವ ಚುನಾವಣೆ ಗೆಲ್ಲುವ ಗುರಿಯನ್ನು ರಾಜ್ಯ ನಾಯಕರು ಹಾಕಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಬೇರೆ ಜಿಲ್ಲೆಗಳಲ್ಲಿ ಪರಿಣಾಮಕಾರಿ ಕೆಲಸಗಳಾಗುತ್ತಿವೆ. ಆದರೆ, ಹಾಸನದಲ್ಲಿ ಮಾತ್ರ ಪಕ್ಷದ ಜಿಲ್ಲಾಧ್ಯಕ್ಷ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ, ಮಾಧ್ಯಮ ವಕ್ತಾರ ಸೇರಿ ಯಾರೂ ಕೂಡ ಇದಕ್ಕೂ ತಮಗೂ ಸಂಬಂಧವಿಲ್ಲ ಎನ್ನುವ ಹೇಳಿಕೆ ನೀಡಿದ್ದಾರೆ. ಜಿಲ್ಲಾಡಳಿತ ಮಾಡುವ ಕೆಲಸಕ್ಕೆ ನಾವು ಮಧ್ಯ ಪ್ರವೇಶಿಸುವುದಿಲ್ಲವೆಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಈ.ಲಕ್ಷ್ಮಣ್ ಅವರು ಪ್ರತಿಕ್ರಿಯಿಸಿದ್ದಾರೆ.

# ಈ ಕಪ್ಪು ಸುಂದರಿ ರೊಕ್ಕದ ಬಂಗಾರಿ!

**“ ಈ ಸುಂದರಿಯ ಜನ್ಮರಹಸ್ಯದ ಹಿಂದೆ ಕೆಲವು ಮಿಲಿಯನ್ ವರ್ಷಗಳ ಹಿಂದಿನ ಇತಿಹಾಸವಿದೆ. ಸುಮಾರು 250 ಮಿಲಿಯನ್ ಅಥವಾ ಅದಕ್ಕೂ ಹೆಚ್ಚು ವರ್ಷಗಳ ಹಿಂದೆ, ಈಗ ತೈಲನಿಕ್ಷೇಪ ಇರುವೆಡೆಯೆಲ್ಲಾ ಜಲಚರಗಳೂ, ದೊಡ್ಡ ಪ್ರಮಾಣದ ಆಲ್ಗೈ ಮುಂತಾದ ಸಸ್ಯಗಳೂ, ಜೀವಿಗಳೂ ಇದ್ದವು. ಭೌಗೋಳಿಕ ಬದಲಾವಣೆಯಿಂದಾಗಿ ಅವೆಲ್ಲ ಭೂಮಿಯಡಿ ಸೇರಿಕೊಂಡವು.**



ವಿದೇಶವಾಸಿ ಕೆಲ ವರ್ಷದ ಹಿಂದೆ, ಈ ತೈಲಮಹಿಮೆ ಏನಾದರೂ ಬಲ್ಲಿರಾ.. ಎಂಬ ಶೀರ್ಷಿಕೆಯಡಿ, ಕೃಷ್ಣ ಸುಂದರಿ, ಕಪ್ಪು ಚಿನ್ನ ಎಂದೆಲ್ಲ ಕರೆಯಲ್ಪಡುವ ಕಚ್ಚಾತೈಲದ ಬಗ್ಗೆ ಈ ಅಂಕಣದಲ್ಲಿ ಬರೆದಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ್ದ ಓದುಗರು, ಇನ್ನಷ್ಟು ಆಳಕ್ಕಿಳಿದು ಈ ಕೃಷ್ಣ ಸುಂದರಿಯ ಜಾತಕವನ್ನು ಅರಿಯುವಷ್ಟರ ಮಟ್ಟಿಗಿನ ಕುತೂಹಲವನ್ನು ವ್ಯಕ್ತಪಡಿಸಿದ್ದರು (ಈ ಕಚ್ಚಾತೈಲಕ್ಕೇನಾದರೂ ಜೀವವಿದ್ದಿದ್ದರೆ ಮದುವೆಯಾಗುತ್ತಿದ್ದರೇನೋ!) ಇರಲಿ. ಭೂಗರ್ಭದಲ್ಲಿ ಅಡಗಿರುವ ಕಡಲ ಒಡಲ ಆಳವನ್ನು ಶಬ್ದಗಳಲ್ಲಿ ಕಟ್ಟಿಕೊಡಲಾದೀತೇ? ಅದೊಂದು ಬತ್ತದ ಅಕ್ಷಯಪಾತ್ರೆ. ಅಗೆದಷ್ಟೂ ಆಶ್ಚರ್ಯ, ಬಗೆದಷ್ಟೂ ವಿಸ್ಮಯ! ಸಾಧ್ಯವಾದಷ್ಟನ್ನು ಇಲ್ಲಿ ತೆರೆದಿಟ್ಟಿರುವೆ:

ಈ ಸುಂದರಿಯ ಜನ್ಮರಹಸ್ಯದ ಹಿಂದೆ ಕೆಲವು ಮಿಲಿಯನ್ ವರ್ಷಗಳ ಹಿಂದಿನ ಇತಿಹಾಸವಿದೆ. ಸುಮಾರು 250 ಮಿಲಿಯನ್ ಅಥವಾ ಅದಕ್ಕೂ ಹೆಚ್ಚು ವರ್ಷಗಳ ಹಿಂದೆ, ಈಗ ತೈಲನಿಕ್ಷೇಪ ಇರುವೆಡೆಯೆಲ್ಲಾ ಜಲಚರಗಳೂ, ದೊಡ್ಡ ಪ್ರಮಾಣದ ಆಲ್ಗೈ ಮುಂತಾದ ಸಸ್ಯಗಳೂ, ಜೀವಿಗಳೂ ಇದ್ದವು. ಭೌಗೋಳಿಕ ಬದಲಾವಣೆಯಿಂದಾಗಿ ಅವೆಲ್ಲ ಭೂಮಿಯಡಿ ಸೇರಿಕೊಂಡವು. ತೀವ್ರ ಉಷ್ಣತೆ ಮತ್ತು ಒತ್ತಡದಿಂದಾಗಿ ಅವು ಕೊಳೆತು, ಭೂಮಿಯಲ್ಲಿನ ಇತರ ಖನಿಜಾಂಶಗಳ ಜತೆ ಸೇರಿ, ಕಪ್ಪುಬಣ್ಣದ ಕಚ್ಚಾತೈಲವಾಗಿ ಜನ್ಮತಳೆದವು.

ಭೂಮಿಯೊಳಗಿನ ತೈಲನಿಕ್ಷೇಪವನ್ನು ಕಂಡುಹಿಡಿಯುವುದು ಹೇಗೆ? ಮುಂಚಿನ ದಿನಗಳಲ್ಲಿ, ಭೂಸ್ತರವನ್ನು ಸೋಟಗೊಳಿಸಿದಾಗ ಉಂಟಾಗುವ ಕಂಪನವನ್ನು ಅವಲೋಕಿಸಿ ತೈಲನಿಕ್ಷೇಪವನ್ನು ಪತ್ತೆ ಹಚ್ಚುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಬಾಬತ್ತಿಗೆ ವಿಶೇಷ ವಾಹನವನ್ನು ಬಳಸುತ್ತಾರೆ.

ಭಾರಿಗಾತ್ರದ ಈ ಶಕ್ತಿಶಾಲಿ ವಾಹನಕ್ಕೆ ಮರುಭೂಮಿಯಲ್ಲೂ ಚಲಿಸಬಲ್ಲ ಚಕ್ರವಿರುತ್ತದೆ. ವಾಹನದ ಕೆಳಭಾಗದಲ್ಲಿ ದಪ್ಪನೆಯ ಲೋಹದ ತಟ್ಟೆಯನ್ನು ಅಳವಡಿಸಿರುತ್ತಾರೆ. ಹೈಡ್ರಾಲಿಕ್ ಜ್ಯಾಕ್ ಮೂಲಕ ಭೂಮಿಯನ್ನು ಸ್ಪರ್ಶಿಸಿ ಕಂಪನ ಉಂಟುಮಾಡುವುದು ಇದರ ಕೆಲಸ. ಇಂಥ 8–10 ವಾಹನಗಳು ಒಂದು ಸ್ಥಳದಲ್ಲಿ ಒಟ್ಟಿಗೆ ನಿಂತು ಏಕಕಾಲದಲ್ಲಿ ಕಂಪನವನ್ನು ಉಂಟು ಮಾಡಿದಾಗ, ಭೂಮಿಯ ಒಡಲಲ್ಲಿರುವ ದ್ರವಸಾಗರದಲ್ಲಿ ಅಲೆ ಉಂಟಾಗುತ್ತದೆ. ಆ ಅಲೆಯ ಪ್ರಮಾಣ, ಗಾತ್ರಗಳು ಅದೇ ವಾಹನದಲ್ಲಿರುವ ಯಂತ್ರಗಳಲ್ಲಿ ದಾಖಲಾಗುತ್ತವೆ.

ನಮ್ಮ ದೇಹದ ಎಕ್ಸ್‌ರೇ, ಇಸಿಜಿಯನ್ನು ದಾಖಲು ಮಾಡಿದಂತೆಯೇ ಈ ಯಂತ್ರವು ಭೂಮಿಯ (ವಿಶೇಷವಾಗಿ ತೈಲ ಸರೋವರದ) ಎಕ್ಸ್‌ರೇ, ಇಸಿಜಿ ಇತ್ಯಾದಿಗಳನ್ನು ದಾಖಲಿಸುತ್ತದೆ. ಅದಕ್ಕನುಗುಣವಾಗಿ ಆ ಸ್ಥಳದಲ್ಲಿ ಎಷ್ಟು ತೈಲವಿದೆ? ಯಾವ ಗಾತ್ರದ ಬಾವಿ ಕೊರೆಯಬೇಕು? ಇತ್ಯಾದಿಗಳು ನಿರ್ಣಯಿಸಲ್ಪಡುತ್ತವೆ. ಮುಂದಿನ ಕಾರ್ಯ ರಿಗ್‌ನದ್ದು.

ತೈಲಜಗತ್ತಿನ ಪರಿಭಾಷೆಯಲ್ಲಿ ರಿಗ್ ಎಂದರೆ ತೈಲವನ್ನು ಭೂಮಿಯಿಂದ ಹೊರತೆಗೆಯಲು ಬಳಸುವ ಯಂತ್ರ ಮತ್ತು ಸಂಬಂಧಿತ ವ್ಯವಸ್ಥೆ. ಇದರ ಕಾರ್ಯವೈಖರಿಯು, ಕೊಳವೆಬಾವಿ (ಬೋರ್‌ವೆಲ್) ಕೊರೆಯುವ ಪ್ರಕ್ರಿಯೆಯಂತೆಯೇ ಇರುತ್ತದೆ, ಆದರೆ ಗಾತ್ರ ಮತ್ತು ಪ್ರಮಾಣದಲ್ಲಿ ಅದಕ್ಕಿಂತ ದೊಡ್ಡದು ಎನ್ನಬಹುದು. ತೈಲಬಾವಿ ಕೊರೆಯಲು ದೊಡ್ಡ ಗಾತ್ರದ, ತುದಿಯಲ್ಲಿ ವಜ್ರಾಕಾರವಿರುವ ಡ್ರಿಲ್ ಬಿಟ್ ಅಥವಾ ಡ್ರಿಲ್ಲಿಂಗ್ ಶಾಫ್ಟ್ ಬಳಸಲಾಗುತ್ತದೆ. ಬಾವಿಯ ವ್ಯಾಸಕ್ಕೆ ಬೇಕಾದ ವ್ಯಾಸ ಹೊಂದಿರುವ ಈ ಶಾಫ್ಟ್ ಸುಮಾರು 10 ಮೀ. ಉದ್ದವಿರುತ್ತದೆ. ಪ್ರತಿ ಗಂಟೆಗೆ ಸುಮಾರು 5 ಮೀ. ಆಳ ಕೊರೆಯುವ ಈ ಯಂತ್ರ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ.

ಕೊರೆಯುವಾಗ ಉಷ್ಣತೆ ಹೆಚ್ಚಾಗದಂತೆ ತಡೆಯಲು ಶಾಫ್ಟ್‌ನ ತುದಿಗೆ ನೀರು ಸಿಂಪಡಿಸಲಾಗುತ್ತದೆ. ಸುಲಭವಲ್ಲದ ಈ ಕ್ರಿಯೆಯಲ್ಲಿ ಹೊಮ್ಮುವ ಅಸಹನೀಯ ಶಬ್ದ ಮತ್ತು ವಾಸನೆಯು, ಆ ಕೆಲಸದಲ್ಲಿ ತೊಡಗಿದವರನ್ನು ಹೈರಾಣಾಗಿಸುತ್ತದೆ. ಜತೆಗೆ, ಭೂಮಿಯೊಳಗಿನ ವಿಷಾನಿಲ ಸೋರುವ ಭಯವಂತೂ ಇದ್ದದ್ದೇ. ಈ ಕಾರಣಕ್ಕಾಗಿಯೇ, ರಿಗ್‌ಗಳಲ್ಲಿ ಕೆಲಸ ಮಾಡುವವರಿಗೆ ತಿಂಗಳಿಗೋ ಒಂದೂವರೆ ತಿಂಗಳಿಗೋ ಒಮ್ಮೆ ಕಮ್ಮಿಯೆಂದರೂ 15 ದಿನಗಳ ರಜೆಯಿರುತ್ತದೆ.

ತೈಲಬಾವಿ ಕೊರೆಯಬೇಕಾದ ಸ್ಥಳವನ್ನು ಸೆಲ್ಲಾರ್ ಏರಿಯಾ ಎನ್ನುತ್ತಾರೆ. ರಿಗ್‌ನ (ಪ್ಲಾಟ್ ಫಾರ್ಮ್‌ನ) ನಾಲ್ಕೂ ಮೂಲೆಗಳು ಭೂಮಿಯ ಮೇಲೆ ಸಮನಾಗಿರುವುದು ಅವಶ್ಯವಾದ್ದರಿಂದ, ಆ ಸ್ಥಳದ ಸುತ್ತಲೂ ಸುಮಾರು 25ರಿಂದ 50 ಮೀ. ಸುತ್ತಳತೆಯಲ್ಲಿ, ರಿಗ್‌ನ ಸಾಮರ್ಥ್ಯಕ್ಕೆ ತಕ್ಕಂತೆ ಭೂಮಿಯನ್ನು ಸಮತಟ್ಟು ಮಾಡಲಾಗುತ್ತದೆ.

ಇಲ್ಲವಾದರೆ, ಭೂಮಿಯೊಳಗೆ ಕಿಲೋಮೀಟರ್‌ಗಟ್ಟಲೆ ಸಾಗುವ ಕೊರೆತವು ನೇರವಾಗಿರದೇ ಓರೆಕೋರೆಯಾಗಿ, ಬೇರೆ ಸ್ಥಳವನ್ನು ತಲುಪುವ ಸಾಧ್ಯತೆಯಿರುತ್ತದೆ. ಹೊಸ ತೈಲನಿಕ್ಷೇಪದ ಬಾವಿ ತೋಡಲು ಕಮ್ಮಿಯೆಂದರೂ 3–4 ವಾರ ಸಮಯ ಬೇಕಾಗುತ್ತದೆ. ಬಾವಿ ಕೊರೆದ ನಂತರ ಅದರೊಳಗೆ ಲೋಹದ ಕೊಳವೆಯನ್ನು ಇಳಿಸಲಾಗುತ್ತದೆ. ಈ ಕೊಳವೆಯ ಬುಡದಲ್ಲಿರುವ ರಂಧ್ರಗಳಿಂದ ತೈಲ ಮೇಲೆ ಬರುತ್ತದೆ. ಈ ಕೊಳವೆಯು ಭೂಮಿಯ ಮೇಲೆ ಬರುತ್ತಿದ್ದಂತೆ ಅದಕ್ಕೆ ಕ್ರಿಸ್‌ಮಸ್ ಟ್ರೀ ವಿನ್ಯಾಸದ ಸಲಕರಣೆಯನ್ನು ಅಳವಡಿಸಲಾಗುತ್ತದೆ. ಇದು ತೈಲ ಪ್ರವಾಹದ ಗತಿ, ಒತ್ತಡಗಳನ್ನು ನಿಯಂತ್ರಿಸಲು ಇರುವ ಕವಾಟಗಳನ್ನು ಹೊಂದಿದ ಲೋಹದ ಬುರುಡೆ ಎಂಬುದು ನಿಮ್ಮ ಗಮನಕ್ಕೆ.

ಕೊಲ್ಲಿ ರಾಷ್ಟ್ರಗಳಲ್ಲಿ, ಅದರಲ್ಲೂ ಸೌದಿ ಅರೇಬಿಯಾದಲ್ಲಿ ತೈಲವು ನೈಸರ್ಗಿಕ ಒತ್ತಡದಿಂದಲೇ ಭೂಮಿಯ ಮೇಲ್ಭಾಗಕ್ಕೆ ಬರುತ್ತದೆ. ಹಾಗೆ ಬರುವ ತೈಲದ ಒತ್ತಡವನ್ನು ನಿಯಂತ್ರಿಸಿ, ತನ್ಮೂಲಕ ಕೊಳವೆಗಳು ಒಡೆವ ಅಪಾಯವನ್ನು ತಪ್ಪಿಸುವಲ್ಲಿ ಕ್ರಿಸ್‌ಮಸ್ ಟ್ರೀ ವಿನ್ಯಾಸದ ಸಲಕರಣೆ ಮಹತ್ತರ ಪಾತ್ರ ವಹಿಸುತ್ತದೆ. ಸೌದಿ ಅರೇಬಿಯಾದಂಥ ದೇಶದಲ್ಲಿ ತೈಲ ಸರೋವರದ ಬುಡದಲ್ಲಿ ನೀರನ್ನು ಇಂಜೆಕ್ಟ್ ಮಾಡುತ್ತಾರೆ. ಇದು ತೈಲದ ಮಟ್ಟವು ಸ್ವಾಭಾವಿಕವಾಗಿ ಮೇಲೇರಲು ನೆರವಾಗುತ್ತದೆ.

ಜತೆಗೆ, ತೈಲ ತೆಗೆದ ಜಾಗವನ್ನು ಆವರಿಸಿಕೊಂಡು, ಅದು ನಿರ್ವಾತ ಪ್ರದೇಶವಾಗುವುದನ್ನೂ ಟೊಳ್ಳಾಗುವುದನ್ನೂ ತಪ್ಪಿಸುತ್ತದೆ. ಈ ಕಾರ್ಯಕ್ಕೆಂದು ಸಮುದ್ರದ ನೀರನ್ನು ಪೈಪ್‌ಲೈನ್ ಮೂಲಕ ನೂರಾರು ಕಿ.ಮೀ. ದೂರದವರೆಗೆ ಹರಿಸುವುದೂ ಇದೆ. ಕೆಲವು ದೇಶಗಳಲ್ಲಿ ನೀರಿನ ಬದಲು ಅಥವಾ ನೀರಿನೊಂದಿಗೆ ವಿವಿಧ ಅನಿಲಗಳು, ಆಮ್ಲಗಳು, ಉಗಿಯನ್ನು ಭೂಮಿಯೊಳಗೆ ಇಳಿಸುವುದೂ ಇದೆ. ನೈಸರ್ಗಿಕ ಒತ್ತಡವಿಲ್ಲದ ಸ್ಥಳಗಳಲ್ಲಿ ಕೊಳವೆಯ ಬುರುಡೆಗೆ ಪಂಪ್ ಅಳವಡಿಸಿ, (ಚುಚ್ಚುಮದ್ದಿನ ಸಿರಿಂಜ್ ಬಳಸಿ ರಕ್ತ ತೆಗೆಯುವಂತೆ) ತೈಲವನ್ನು ಭೂಮಿಯಿಂದ ಹೊರಸೆಳೆಯುತ್ತಾರೆ.

ಏತನೀರಾವರಿ ಸಜ್ಜಿಕೆಯಂತೆ ಕಾಣುವ, ತೈಲವನ್ನು ಮೇಲೆತ್ತುವ ಈ ರೇಚಕ ಯಂತ್ರಕ್ಕೆ ಪಂಪಿಂಗ್ ಜ್ಯಾಕ್ ಅಥವಾ (ತಲೆ ಅಲ್ಲಾಡಿಸುವ ಕತ್ತೆ) ಎಂದು ಹೆಸರು. ಇದು ದಿನವಿಡೀ ತಲೆ ಅಲ್ಲಾಡಿಸುವುದರಿಂದ ಈ ಹೆಸರು ಬಂದಿರಬಹುದಾ? ಗೊತ್ತಿಲ್ಲ, ಇರಲೂಬಹುದು! ಆದರೆ ಈ ಕತ್ತೆಯ ತಲೆಯು ಭೂಮಿಯೊಳಗಿನ ದಿವ್ಯದ್ರವವನ್ನೂ, ದ್ರವ್ಯವನ್ನೂ ಹೊರತರುವುದಂತೂ ಸತ್ಯ!

ಭೂಮಿಯ ಮೇಲೆ ಬಂದ ತೈಲವನ್ನು ಸಂಸ್ಕರಣಾ ಸ್ಥಾವರಕ್ಕೆ ಪೈಪ್‌ಲೈನ್ ಮೂಲಕ ಒಯ್ಯಲಾಗುತ್ತದೆ. ಈ ಲೈನ್‌ಗಳ ತಪಾಸಣೆಗೆಂದು ಪಕ್ಕದಲ್ಲೇ ವಾಹನ ಸಂಚಾರಕ್ಕೆ ಕಚ್ಚಾರಸ್ತೆ ನಿರ್ಮಿಸಿರುತ್ತಾರೆ. ಅದು ಪೈಪ್‌ಲೈನ್‌ನ ಬಲಕ್ಕಿದ್ದರೂ ಎಡಕ್ಕಿದ್ದರೂ ಅದಕ್ಕೆ ರೈಟ್ ಆಫ್ ವೇ ಎಂದೇ ಹೆಸರು. ಸಂಸ್ಕರಿಸದ ಕಚ್ಚಾತೈಲವು ಯಾವ ಕೆಲಸಕ್ಕೂ ಬಾರದ ದದ್ದೋಡಿ; ಅದರಲ್ಲಿ ಪೆಟ್ರೋಲ್, ಡೀಸೆಲ್‌ನಂಥ ವಸ್ತುಗಳಿದ್ದರೂ ಅದನ್ನು ಹಾಗೆಯೇ ವಾಹನಗಳಲ್ಲಿ, ಯಂತ್ರಗಳಲ್ಲಿ ಬಳಸುವಂತಿಲ್ಲ.

ಅದರಲ್ಲಿ ನೀರಿನಂಶ ಸೇರಿದಂತೆ ಖನಿಜ, ಅಲ್ಪಪ್ರಮಾಣದ ಅನಿಲದ ಅಂಶಗಳೂ ಸೇರಿರುತ್ತವೆ. ಇವನ್ನೆಲ್ಲಾ ಬೇರ್ಪಡಿಸುವ ಸ್ಥಾವರದಲ್ಲಿ ದೊಡ್ಡ ಟ್ಯಾಂಕ್‌ಗಳಲ್ಲಿ ಅಳವಡಿಸಲಾಗಿರುತ್ತದೆ. ಕಚ್ಚಾತೈಲದ ಸಂಸ್ಕರಣೆ ನಡೆಯುವುದು ಈ ಟ್ಯಾಂಕ್‌ಗಳಲ್ಲಿಯೇ. ಕಚ್ಚಾತೈಲವೆಂದರೆ ಪ್ರಮುಖವಾಗಿ ಹೈಡ್ರೋಕಾರ್ಬನ್‌ನ ಮಿಶ್ರಣ. ಇದರಲ್ಲಿ ವಿವಿಧ ಪ್ರಮಾಣದಲ್ಲಿ ಇಂಗಾಲದ ಪರಮಾಣುಗಳು ಸೇರಿಕೊಂಡಿರುತ್ತವೆ. ಅವುಗಳ ತೂಕದಲ್ಲೂ ವ್ಯತ್ಯಾಸವಿರುತ್ತದೆ.

ಕಚ್ಚಾತೈಲದಿಂದ ಪೆಟ್ರೋಲ್ ತೆಗೆಯುವ ಕಾರ್ಯವೂ ಒಂದು ಸಾಹಸವೇ. ಪೈಪ್‌ಲೈನ್‌ನಿಂದ ಬರುವ ಕಚ್ಚಾತೈಲವನ್ನು ಸುಮಾರು 350 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶದಲ್ಲಿ, ದೊಡ್ಡ ಲೋಹದ ಟ್ಯಾಂಕ್‌ನ ಕೆಳಭಾಗಕ್ಕೆ ತರಲಾಗುತ್ತದೆ. ಈ ಬಿಸಿತೈಲದ ಉಗಿ ಮೇಲೇಳುವಾಗ ಅದರಲ್ಲಿರುವ ಅಣುಗಳನ್ನು ವಿಭಿನ್ನ ಸ್ತರದಲ್ಲಿ ಸೋಸಿ ತಣ್ಣಗೆ ಮಾಡುತ್ತಾರೆ. ಆಗ, ಭಾರವಾದ ಅಣುಗಳು ಕೆಳಸ್ತರದಲ್ಲಿ ಡಾಂಬರ್ ಆಗಿ ಉಳಿದುಕೊಳ್ಳುತ್ತವೆ.

ಅಣುಗಳು ಎಲ್ಲಕ್ಕಿಂತ ಮೇಲಿನ ಸ್ಥಾಯಿ ತಲುಪಿದಾಗ, 20 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶಕ್ಕೆ ತಂದಾಗ ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ (ಅಡುಗೆ ಅನಿಲಕ್ಕೆ ಬಳಸುವ ಎಲ್‌ಪಿಜಿ) ಆಗಿ ಮಾರ್ಪಡುತ್ತದೆ. ಅದರ ಕೆಳಗೆ ಸ್ಥಾಯಿಯಾದ ಅಣುಗಳು ಪ್ರೊಪೇನ್ ಆಗಿ ಬೇರ್ಪಡುತ್ತವೆ. ಆದರೆ ಕೆಳಗಿನ ಮನೆಯ ಅಣುಗಳು 30ರಿಂದ 150 ಡಿಗ್ರಿಗೆ ಬಂದಾಗ, ನಳನಳಿಸುವ ಪೆಟ್ರೋಲ್ ಮತ್ತು ಅದರ ಕೆಳಗಿನ ಮನೆಯ ಅಣುಗಳು ನಾಫ್ತಾ (ಪ್ಲಾಸ್ಟಿಕ್, ಕಾಸ್ಮೆಟಿಕ್ಸ್, ಔಷಧಗಳಲ್ಲಿ ಬಳಸಲಾಗುತ್ತದೆ), ಅದಕ್ಕೂ ಕೆಳಗಿನದ್ದು (ಸುಮಾರು 200 ಡಿಗ್ರಿ) ಕೆರೋಸಿನ್, ಅದಕ್ಕೂ ಕೆಳಗಿನದ್ದು ಡೀಸೆಲ್ ಆಗಿ ಬೇರ್ಪಡುತ್ತವೆ.

ಎಲ್ಲಕ್ಕಿಂತ ಕೆಳಗೆ ಉಳಿಯುವ ಅಣುಗಳು (ಸುಮಾರು 450 ಡಿಗ್ರಿ) ಹಡಗಿನ ಇಂಧನ, ಡಾಂಬರ್ ಆಗಿ ಉಳಿಯುತ್ತವೆ.

ಸಾಮಾನ್ಯವಾಗಿ ಒಂದು ಬ್ಯಾರೆಲ್‌ನಲ್ಲಿರುವ 159 ಲೀ. ಕಚ್ಚಾತೈಲದಿಂದ 73 ಲೀ. ಪೆಟ್ರೋಲ್, 35 ಲೀ. ಡೀಸೆಲ್, 20 ಲೀ. ಜೆಟ್ ಫ್ಯೂಯೆಲ್, 6 ಲೀ. ಪ್ರೊಪೇನ್ ಅನ್ನು ಉತ್ಪಾದಿಸಲಾಗುತ್ತದೆ. ಉಳಿದವು ಸಲರ್, ಬ್ಯುಟೇನ್, ಆಕ್ರಿಲಿಕ್, ಪ್ಯಾರಾಕ್ಸಲೀನ್, ಪ್ಲಾಸ್ಟಿಕ್, ಕೀಟನಾಶಕಗಳು, ಡಾಂಬರ್ ಇತ್ಯಾದಿಗಳ ಉತ್ಪಾದನೆಗೆ ಬಳಕೆಯಾಗುತ್ತವೆ.

ವಿಶ್ವದ ಅತಿದೊಡ್ಡ ತೈಲನಿಕ್ಷೇಪ ಎಂಬ ಹೆಗ್ಗಳಿಕೆಗೆ ಪಾತ್ರವಾದದ್ದು ಅಮೆರಿಕದ ಟೆಕ್ಸಾಸ್ ಪ್ರದೇಶ. ಇಲ್ಲಿ ತೈಲನಿಕ್ಷೇಪವನ್ನು ಗುರುತಿಸಿದ್ದು 1890ರ ಮಧ್ಯಭಾಗದಲ್ಲಿ. ಆಗಿನಿಂದ ಇದುವರೆಗೆ ಈ ಪ್ರದೇಶ ದಿಂದ 60 ಬಿಲಿಯನ್ ಬ್ಯಾರೆಲ್‌ಗೂ ಹೆಚ್ಚಿನ ತೈಲವನ್ನು ಹೊರತೆಗೆದಿದ್ದು, ಇನ್ನೂ ಸಾಕಷ್ಟು ಪ್ರಮಾಣದ ತೈಲನಿಕ್ಷೇಪ ಅಲ್ಲಿ ಉಳಿದಿದೆಯಂತೆ. ಕೊಲ್ಲಿರಾಷ್ಟ್ರಗಳಲ್ಲಿ ಮೊಟ್ಟಮೊದಲ ತೈಲ ನಿಕ್ಷೇಪವನ್ನು ಗುರುತಿಸಿದ್ದು ದ್ವೀಪರಾಷ್ಟ್ರ ಬಹ್ರೈನ್‌ನಲ್ಲಿ, 1931ರಲ್ಲಿ. 7 ವರ್ಷದ ನಂತರ ಸೌದಿ ಅರೇಬಿಯಾದ ಮೊದಲ ತೈಲಬಾವಿ ಕಾರ್ಯಾರಂಭ ಮಾಡಿತು.

ಹಿಂದೆಲ್ಲಾ ಡಾಂಬರ್‌ಗಾಗಿ ಬಳಸುತ್ತಿದ್ದ ಕಚ್ಚಾತೈಲಕ್ಕೆ ಮೊದಲು ಬೇಡಿಕೆ ಬಂದಿದ್ದು ವಿಶ್ವಯುದ್ಧದ ಸಂದರ್ಭದಲ್ಲಿ. ಯುದ್ಧ ವಾಹನ/ವಿಮಾನಗಳು ಮತ್ತು ಯಂತ್ರಗಳಲ್ಲಿ ಬಹಳಷ್ಟು ಪೆಟ್ರೋಲ್ ಬಳಕೆಯಾಯಿತು. ನಂತರದ ದಿನಗಳಲ್ಲಿ ವಾಹನ ಸಂಚಾರ ಹೆಚ್ಚಾಗಿ ಇನ್ನಷ್ಟು ಬೇಡಿಕೆ ಬಂತು. ಪೆಟ್ರೋಲ್, ಡೀಸೆಲ್, ಪ್ಲಾಸ್ಟಿಕ್ ಮುಂತಾದ ಪೆಟ್ರೋಲಿಯಂ ಉತ್ಪನ್ನಗಳ ಬಳಕೆಯಿಂದಾಗಿ ಪರಿಸರ ಮತ್ತು ಹವಾಮಾನದ ಮೇಲೆ ಹೆಚ್ಚಿನ ದುಷ್ಪರಿಣಾಮವಾಗುತ್ತಿದೆ ಎಂಬುದಂತೂ ಸತ್ಯ. ಈ ಕಾರಣದಿಂದಲೇ ಇಂದು ವಿಶ್ವಾದ್ಯಂತ ಪರ್ಯಾಯ ವ್ಯವಸ್ಥೆಗೆ ಹುಡುಕಾಟ ನಡೆದಿದ್ದು, ಅದರ ಪರಿಣಾಮವಾಗಿ ಸೌರ ಇಂಧನ, ಜೈವಿಕ ಇಂಧನ ಮೊದಲಾದವು ಪೆಟ್ರೋಲಿಯಂ ಉತ್ಪನ್ನಗಳ ಸ್ಥಳವನ್ನು ಆಕ್ರಮಿಸುತ್ತಿವೆ. ಈ ಬದಲಾವಣೆ ಎಷ್ಟೇ ಕ್ಷಿಪ್ರಗತಿಯಲ್ಲಾದರೂ, ಕೃಷ್ಣ ಸುಂದರಿಯು ಯೌವನದಿಂದ ಮುಪ್ಪಿಗೆ ಜಾರಲು ಇನ್ನೂ 40 ವರ್ಷಗಳೇ ಬೇಕು.

ನೋಡಲು ಕಪ್ಪು, ಮುಟ್ಟಿದರೆ ಸ್ವಲ್ಪ ಅಂಟಂಟು, ಬಟ್ಟೆಗೆ ತಾಗಿದರೆ ಕಲೆ ಶಾಶ್ವತ, ಹತ್ತಿರ ಹೋದರೆ ಕೊಳೆತ ಕೋಳಿಮೊಟ್ಟೆಯಂಥ ವಾಸನೆ ಈ ಕಪ್ಪು ಸುಂದರಿಯದ್ದು! ಆದರೆ, ವಿಶ್ವಾದ್ಯಂತ ಪ್ರತಿನಿತ್ಯ ಸುಮಾರು 100 ಮಿಲಿಯನ್ ಬ್ಯಾರೆಲ್‌ನಷ್ಟು ಬಳಕೆಯಿಂದ ಬರುವ ಆದಾಯದ ಮುಂದೆ ಅದೆಲ್ಲಾ ಯಾವ ಲೆಕ್ಕ? ಕಪ್ಪು ಬಂಗಾರವೆಂದು ಕರೆಸಿಕೊಳ್ಳುವ ಕಚ್ಚಾತೈಲವೆಂದರೆ ರೊಕ್ಕವೋ ರೊಕ್ಕ!

**– ಕಿರಣ್ ಉಪಾಧ್ಯಾಯ,** ಬಹ್ರೈನ್



**❝ ಆರೋಗ್ಯದ ಸಮಸ್ಯೆ ಎಂದಾಕ್ಷಣ ಯಾರೂ ನಿರ್ಲಕ್ಷ್ಯ ಮಾಡಬಾರದು, ಸೂಕ್ತ ಮತ್ತು ಎಷ್ಟು ಬೇಕೋ ಅಷ್ಟು ಎಚ್ಚರಿಕೆ ವಹಿಸಿ, ಚಿಕಿತ್ಸೆ ಪಡೆಯಬೇಕೆಂಬುದಂತೂ ನಿಜ. ಕಳೆದ ಕೆಲವು ವಾರಗಳಲ್ಲಿ ಬೆಂಗಳೂರೂ ಸೇರಿದಂತೆ ನಮ್ಮ ಸುತ್ತಮುತ್ತಲಿನ ಹಲವು ಪ್ರದೇಶಗಳಲ್ಲಿ ನೆಗಡಿ, ಜ್ವರ ಹರಡಿರುವುದಂತೂ ನಿಜ; ಈಗ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂದಣಿಯೂ ಇದೆ; ಜತೆಗೆ, ಪತ್ರಿಕೆಗಳಲ್ಲಿ ಎಚ್1ಎನ್1 ಕುರಿತ ಕಾಳಜಿಯುಕ್ತ ಸುದ್ದಿಗಳೂ ಬರುತ್ತಿವೆ.**

# ಶೀತಗಾಳಿ ಬೀಸಿದಾಗ ಬರುವ ಅತಿಥಿ!

ಪ್ರತಿದಿನ ಸುದ್ದಿಗಳನ್ನು ಗಮನಿಸುವವರಿಗೆ, ನಾನಾ ರೀತಿಯ ರಾಜಕೀಯದ ಒಳಸುಳಿಗಳು, ಸಕ್ಕರೆಯ ಬೆಲೆ ದಿಢೀರ್ ಏರಿಕೆ, ನೇಪಾಳ ಪ್ರವಾಹ ಮೊದಲಾದ ಸುದ್ದಿಗಳ ನಡುವೆಯೇ, ಅಲ್ಲಲ್ಲಿ ಕಾಡುತ್ತಿರುವ ವಿವಿಧ ರೀತಿಯ ಜ್ವರಗಳ ಸುದ್ದಿಯೂ ಕಣ್ಣಿಗೆ ಬಿದ್ದಿರಬೇಕು. ಕಣ್ಣಿಗೆ ಬೀಳುವುದೇನು, ಕೆಲವರ ಮನೆಗಳಲ್ಲಿ ಒಬ್ಬ ಅತಿಥಿಯು ಆಹ್ವಾನವಿಲ್ಲದೇ ಒಳಪ್ರವೇಶಿಸಿ, ಅದಾಗಲೇ ಜ್ವರದ ಕಾಟ ಆರಂಭವಾಗಿರಬಹುದು.

ಎಚ್1ಎನ್1, ಫ್ಲೂ, ಹಂದಿಜ್ವರ, ವೈರಲ್ ಫಿವರ್ ಮೊದಲಾದ ಹೆಸರುಗಳಲ್ಲಿ, ಈಗ ನಮ್ಮ ರಾಜ್ಯದ ಹಲವು ಜಿಲ್ಲೆಗಳಲ್ಲಿ ಜ್ವರದ ಸಂಚಾರ ನಡೆಯುತ್ತಿದೆ; ಸಂಚಾರ ಎಂದೇಕೆ ಹೇಳಿದೆನೆಂದರೆ, ವೈರಸ್‌ನಿಂದ ಹರಡುವ ಕೆಲವು ಜ್ವರಗಳು ಒಬ್ಬರಿಂದ ಒಬ್ಬರಿಗೆ ಹರಡುತ್ತಾ, ಅವರು ಸಂಚರಿಸಿದಲ್ಲೆಲ್ಲಾ ತನ್ನ ಹೆಜ್ಜೆಯನ್ನೂ ಊರಿ, ಊರಿಂದೂರಿಗೂ ಸಂಚರಿಸುವುದುಂಟು!

ಜ್ವರ ಎಂದಾಕ್ಷಣ ಒಮ್ಮೆಗೇ ಗಾಬರಿಯಾಗಬೇಕಿಲ್ಲ ನಿಜ, ಆದರೆ ಮಕ್ಕಳಿಗೆ ಜ್ವರ ಬಂದ ತಕ್ಷಣ, ಮನೆಯವರೆಲ್ಲರಿಗೂ ಹೆಚ್ಚು ಕಾಳಜಿ ವಹಿಸಬೇಕಾಗುವುದಂತೂ ನಿಜ. ಮಳೆಗಾಲದಲ್ಲಿ ಜ್ವರ ಸಾಮಾನ್ಯ, ವೈರಲ್ ಜ್ವರ ಒಂದು ವಾರದಲ್ಲಿ ಗುಣವಾಗುತ್ತದೆ ಎಂದೆಲ್ಲಾ ಧೈರ್ಯ ಹೇಳಿದರೂ, ನಮ್ಮದೇ ಮನೆಯಲ್ಲಿ ಜ್ವರ ನೆಗಡಿ ಕಾಟ ಶುರುವಾದಾಗ, ಇಂತಹ ಉಪದೇಶಗಳೆಲ್ಲಾ ಮೂಲೆ ಗುಂಪಾಗುತ್ತವೆ, ಅದ್ಯಾವ ಮಾತ್ರೆ ತಿನ್ನಲಿ, ಯಾವ ಕಷಾಯ ಕುಡಿಯಲಿ ಅಥವಾ ಹತ್ತಿರದ ವೈದ್ಯರ ಹತ್ತಿರ ಹೋಗಲೋ, ದೊಡ್ಡಾಸ್ಪತ್ರೆಗೆ ಹೋಗಲೋ ಎಂದು ಮನಸ್ಸು ಯೋಚನಾಲಹರಿಯಲ್ಲಿ ಮುಳುಗಿಹೋಗುತ್ತದೆ.

ಆರೋಗ್ಯದ ಸಮಸ್ಯೆ ಎಂದಾಕ್ಷಣ ಯಾರೂ ನಿರ್ಲಕ್ಷ್ಯ ಮಾಡಬಾರದು, ಸೂಕ್ತ ಮತ್ತು ಎಷ್ಟು ಬೇಕೋ ಅಷ್ಟು ಎಚ್ಚರಿಕೆ ವಹಿಸಿ, ಚಿಕಿತ್ಸೆ ಪಡೆಯಬೇಕೆಂಬುದಂತೂ ನಿಜ. ಕಳೆದ ಕೆಲವು ವಾರಗಳಲ್ಲಿ ಬೆಂಗಳೂರೂ ಸೇರಿದಂತೆ ನಮ್ಮ ಸುತ್ತಮುತ್ತಲಿನ ಹಲವು ಪ್ರದೇಶಗಳಲ್ಲಿ ನೆಗಡಿ, ಜ್ವರ ಹರಡಿರುವುದಂತೂ ನಿಜ; ಈಗ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂದಣಿಯೂ ಇದೆ; ಜತೆಗೆ, ಪತ್ರಿಕೆಗಳಲ್ಲಿ ಎಚ್1ಎನ್1 ಕುರಿತ ಕಾಳಜಿಯುಕ್ತ ಸುದ್ದಿಗಳೂ ಬರುತ್ತಿವೆ.

ರಾಜ್ಯದಲ್ಲಿ ಬರಗಾಲದ ವಾತಾವರಣ ಇದ್ದರೂ, ಕೆಲವು ಕಡೆ ಕಳೆದ ಒಂದು ತಿಂಗಳಿನಲ್ಲಿ ಸಾಕಷ್ಟು ಮಳೆಯಾಗಿದೆ; ಅದಕ್ಕಿಂತ ಮುಖ್ಯವಾಗಿ, ಆಗಾಗ ತುಂತುರು ಮಳೆಯಾಗುತ್ತಿದೆ; ಇದರಿಂದಾಗಿ, ಥಂಡಿ ವಾತಾವರಣ ಸೃಷ್ಟಿಯಾಗುತ್ತಿದೆ. ಈಗ ಒಂದೆರಡು ವಾರಗಳಿಂದ ಹಲವು ಕಡೆ ಥಂಡಿ ವಾತಾವರಣವಿದ್ದು, ಇಂತಹ ವಾತಾವರಣದಲ್ಲೇ ಜ್ವರ ನೆಗಡಿ ಕಾಡುವುದು. ನಮ್ಮ ಹಳ್ಳಿಯಲ್ಲಿ ಹಿಂದೆಲ್ಲಾ ಮಳೆಗಾಲ ಎಂದರೆ, ಜ್ವರದ ಕಾಲ ಎಂದೇ ಅರ್ಥ.

ನಮ್ಮೂರಿನಲ್ಲಿ ಕೆಲವು ವರ್ಷ ಮಳೆಗಾಲದಲ್ಲಿ, ಪ್ರತಿ ದಿನ ಮಳೆ ಸುರಿಯುತ್ತಿದ್ದುದುಂಟು; ಕೆಲವು ವರ್ಷಗಳಂತೂ, ಒಂದೇ ಸಮನೆ ಆರೆಂಟು ದಿನ ಸಂದು ಕಡಿಯದೇ ಮಳೆ ಸುರಿದದ್ದನ್ನು ಗಮನಿಸ ಬಹುದು. ಅಂತಹ ವರ್ಷಗಳಲ್ಲಿ ಹಳ್ಳಿಯ ಎಲ್ಲಾ ಮನೆಗಳಲ್ಲೂ ಜ್ವರ, ನೆಗಡಿ, ಮೈಕೈ ನೋವು. ಯಾರನ್ನು ಕಂಡರೂ ಮೂಗು ಸೊರಸೊರ, ಗಂಟಲು ಗದ್ಗದ! ಥಂಡಿ ವಾತಾವರಣವಿದ್ದಾಗ, ಒಮ್ಮೆ ಬಂದ ವೈರಲ್ ಫಿವರ್ ಬೇಗನೆ ಗುಣವಾಗುವುದಿಲ್ಲವಾದ್ದರಿಂದ, ಇಂತಹ ಸ್ಥಿತಿ.

ಕವಿಗಳಿಗೆ, ಕವಿ ಮನಸ್ಸಿನವರಿಗೆ, ಭಾವಜೀವಿಗಳಿಗೆ ಮಳೆಗಾಲ ಎಂದರೆ ಮಧುರ ಭಾವನೆಗಳನ್ನು ಹುಟ್ಟು ಹಾಕುವ ಋತು. ಹೊರಗೆ ಜಿರಾಪತಿ ಮಳೆ ಸುರಿಯುತ್ತಿರುವಾಗ, ಮನೆಯೊಳಗೆ ಕುಳಿತು, ಮಳೆಯನ್ನೇ ನೋಡುತ್ತಾ, ಅದರ ಸಂಗೀತವನ್ನು ಕೇಳುತ್ತಾ ಮನಸ್ಸಿನ ಲಗಾಮು ಕಳಚಿಬಿಡುವುದು ಒಂದು ಮಧುರ ಅನುಭವವೇ ಸೈ. ಒಲೆಯ ಕೆಂಡದಲ್ಲಿಟ್ಟು ಸುಟ್ಟ ಹಲಸಿನ ಹಪ್ಪಳ, ಅದರ ಮೇಲೆ ನಾಲ್ಕಾರು ಸುಟ್ಟ ಗೋಡಂಬಿಗಳಿದ್ದರಂತೂ, ಎಡೆಬಿಡದೆ ಸುರಿವ ಮಳೆಯ ಅನುಭವ ನಿಧಾನವಾಗಿ ಮನದೊಳಗೆ ಇಳಿಯುತ್ತದೆ; ಇತ್ತ ಹಪ್ಪಳ ಮತ್ತು ಸುಟ್ಟ ಗೋಡಂಬಿಯ ಕಾಂಬಿನೇಷನ್‌ನ ರುಚಿ ಹೊಟ್ಟೆಯೊಳಗೆ ಇಳಿಯುತ್ತದೆ!

ಈಗಲೂ, ಮಳೆಗಾಲ ನೋಡಲೆಂದೇ ನಗರದ ಜನರು, ಮಲೆನಾಡಿಗೆ ಮತ್ತು ಕರಾವಳಿಯ ಹಳ್ಳಿಗಳಿಗೆ ಹೋಗುವುದುಂಟು; ಕೆಲವು ರಾಜ್ಯಗಳು ಮಳೆಗಾಲದ ಪ್ರವಾಸವನ್ನೇ ಏರ್ಪಡಿಸಿ, ಮಳೆಗಾಲವೆಂದರೆ, ಎಲ್ಲರೂ ನೋಡಲೇಬೇಕಾದ ಒಂದು ಅನುಭವ ಎಂಬ



ಭಾವನೆಯನ್ನೂ ಹುಟ್ಟು ಹಾಕಿವೆ.

ಇದರಲ್ಲಿ ಸತ್ಯಾಂಶವಿಲ್ಲದೇ ಇಲ್ಲ. ಆದರೆ, ಹಿಂದೆಲ್ಲಾ ನಮ್ಮ ಹಳ್ಳಿಗಳಲ್ಲ ಮಳೆಗಾಲವೆಂದರೆ, ಮಧುರ ಭಾವನೆಗಳ ಜತೆಯಲ್ಲೂ, ನೋವುಂಟು ಮಾಡುವ ಅನುಭವಗಳನ್ನೂ ತರುವಂತಹ ದಿನಗಳು ಎಂಬುದಂತೂ ನಿಜ. ಹಾಗಂತ ಮಲೆನಾಡಿನ ಮಳೆಗಾಲದ ದಿನಗಳ ನೆನಪುಗಳೆಲ್ಲವೂ ಮಧುರವೇ ಎಂದು ಕೇಳಿದರೆ ಇಲ್ಲ ಅಂತಲೇ ಅನ್ನಬೇಕು.

ಮಲೆನಾಡಿನ ಅಂಚಿನಲ್ಲಿರುವ ನಮ್ಮೂರಿನಲ್ಲಿ ನನ್ನ ಬಾಲ್ಯದ ಮಳೆಗಾಲವನ್ನು ನೆನಪಿಸಿಕೊಂಡರೆ ವಾಸ್ತವವಾಗಿ ಅದೊಂದು ಮಿಶ್ರ ಅನುಭವ. ನಮ್ಮ ಹಳ್ಳಿಯ ಅಪ್ಪಟ ಗ್ರಾಮೀಣ ಜೀವಗಳಿಗೆ, ಮಳೆಗಾಲ ಎಂದರೆ ಸಣ್ಣಗೆ ಒಂದು ರೀತಿಯ ಭಯ, ನಡುಕ, ಅಳುಕು, ದಿಗಿಲು ಇತ್ತು. ಈ ವರ್ಷದ ಮಳೆಗಾಲ ಬಂದು ಕಳೆದರೆ ನಾವು ಗೆದ್ದಂತೆ ಎಂದು ಪ್ರತಿವರ್ಷ ದೇವರಿಗೆ ಕೈಮುಗಿಯುತ್ತಿದ್ದ ಹಲವು ಕುಟುಂಬಗಳನ್ನು ಕಂಡಿದ್ದೆ. ಕೆಳ ಮಧ್ಯಮವರ್ಗ ಮತ್ತು ಕೃಷಿ ಕಾರ್ಮಿಕರ ಕುಟುಂಬಗಳಿಗಂತೂ, ಮಳೆಗಾಲವೆಂದರೆ ಕಷ್ಟದ ದಿನಗಳು.

ನಾಲ್ಕು ತಿಂಗಳುಗಳ ಕಾಲ ಸುರಿಯುವ ಮಳೆಗಾಲವನ್ನು ಕ್ಷೇಮವಾಗಿ, ಗೌರವಯುತವಾಗಿ ಕಳೆಯುವುದೇ ಹಲವರಿಗೆ ಒಂದು ಸವಾಲು. ಮಳೆಗಾಲದ ದಿನಗಳಲ್ಲಿ, ವಿಪರೀತ ಮಳೆಯಿಂದ ಕಾಡುವ ಆರೋಗ್ಯದ ಸಮಸ್ಯೆಗಳ ಜತೆಯಲ್ಲೇ, ಕೆಲವು ಕುಟುಂಬಗಳಿಗೆ, ಆ ದಿನಗಳಲ್ಲಿ ಊಟಕ್ಕೆ ಕೊರತೆಯಾಗುವುದರಿಂದ, ಹೊಟ್ಟೆ ತುಂಬಿಸುವ ಕಾಯಕವನ್ನು ಗೌರವಯುತವಾಗಿ ಮಾಡುವ ಅದೃಷ್ಟ ಕೊಡು ದೇವರೇ ಎಂದು ಹಲವು ಕುಟುಂಬಗಳು ಬೇಡಿಕೊಳ್ಳುವುದುಂಟು. ಮಳೆಗಾಲದ ಆರೋಗ್ಯದ ಸಮಸ್ಯೆಗಳಲ್ಲಿ ತೀರಾ ಸಾಮಾನ್ಯ ಎಂದರೆ ಜ್ವರ, ನೆಗಡಿ; ಇದರ ಜತೆಯಲ್ಲೇ, ಹಿಂದೆಂದೋ ಆದ ಮೈಕೈ ನೋವು, ಮೂಳೆ ನೋವು, ಸ್ನಾಯು ಸೆಳೆತ ಮೊದಲಾದವು ಮಳೆಗಾಲದಲ್ಲಿ ಮತ್ತೆ ಮರುಕಳಿಸಿ, ಕಾಡುವುದುಂಟು.

ಜತೆಗೆ, ದಿನವಿಡೀ ಮಳೆ ಸುರಿಯುವಾಗ, ಹೆಚ್ಚು ಹೊರಗೆ ಓಡಾಡದೇ ಇರುವುದರಿಂದಾಗಿ, ಹಲವು ದಿನಗಳ ಕಾಲ ಸೂಕ್ತ ವ್ಯಾಯಾಮ ದೊರಕದೇ, ಆ ಆಯಾಮದಲ್ಲೂ ಆರೋಗ್ಯ ಸಣ್ಣಗೆ ಸೊರಗುತ್ತದೆ. ಜೂನ್ ಮೊದಲ ವಾರ ಸುರಿಯಲಾರಂಭಿಸಿದ ಮಳೆಯು, ಜನಸಾಮಾನ್ಯರಿಗೆ ಮತ್ತು ಬಡವರಿಗೆ ತಂದಿಡುತ್ತಿದ್ದ ಕಷ್ಟಗಳಿಗೆ ಕೊನೆಯೇ ಇರಲಿಲ್ಲ. ಸುರಿವ ಮಳೆಯಲ್ಲೇ ನಾಟಿ ಮಾಡಿ, ಮೂರು ತಿಂಗಳ ನಂತರ ನಡೆಯುವ ಕೊಯ್ಲು ಕೆಲಸ ಬರುವ ತನಕ ಯಾರಿಗೂ ಹೆಚ್ಚಿನ ಕೆಲಸವಿಲ್ಲ.



ಆಷಾಢ, ಶ್ರಾವಣ ಎಂದರೆ ಇನ್ನಷ್ಟು ಕಷ್ಟ; ಕೃಷಿ ಚಟುವಟಿಕೆಗಳು ಆಗ ಕಡಿಮೆ. ಕೆಲಸ ಹುಡುಕಿ ಕೊಂಡು ಹೋಗೋಣವೆಂದರೆ ನಿರಂತರ ಸುರಿವ ಮಳೆ. ಮನೆಯಲ್ಲಿ ಕುಳಿತು ಬರಬರನೆ ಸುರಿಯುವ ಮಳೆಯನ್ನು, ಮಾಡಿನ ಅಂಚಿನಿಂದ ಬೀಳುವ ನೀರನ್ನೇ ನೋಡುತ್ತಾ, ಈ ಮಳೆ ಯಾವಾಗ ಕಡಿಮೆಯಾಗುತ್ತದೆ ಎಂದು ದೇನಿಸುವುದೇ ಪ್ರತಿದಿನದ ದಿನಚರಿ.



ಮಳೆಗಾಲದ ಇಂತಹ ಕಷ್ಟದ ದಿನಗಳನ್ನು ಎದುರಿಸಲೆಂದೇ, ಬೇಸಿಗೆಯಲ್ಲಿ ಕೆಲವು ತಯಾರಿಗಳನ್ನು ಮಾಡುವುದುಂಟು. ಬಿಸಿಲುಕಾಲದಲ್ಲಿ ಸಾಕಷ್ಟು ದೊರೆಯುವ ಗೆಣಸನ್ನು ಖರೀದಿಸಿ, ಸಣ್ಣ ಸಣ್ಣ ಹೋಳುಗಳನ್ನಾಗಿ ಹೆಚ್ಚಿ ಚೆನ್ನಾಗಿ ಒಣಗಿಸಿ, ಅದನ್ನು ಮಳೆಗಾಲದಲ್ಲಿ ಬೇಯಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಕುಟುಂಬಗಳು ಹಲವು.

ಡಬ್ಬಿಗಟ್ಟಲೆ ಹಲಸಿನ ಬೀಜಗಳನ್ನು ಸಂಗ್ರಹಿಸಿ ಅದನ್ನು ಸುಟ್ಟು ಅಥವಾ ಬೇಯಿಸಿ ತಿನ್ನುತ್ತಿದ್ದವರು ಹಲವರು. ಹಲಸಿನ ಹಪ್ಪಳ ಸಹ ಕೆಲವು ದಿನ ಮಳೆಗಾಲದ ಬೆಳಗಿನ ತಿನಿಸು. ಹಲಸಿನ ಹಣ್ಣನ್ನು ಸಹ ಒಂದು ಹೊತ್ತಿನ ಆಹಾರವಾಗಿ ಸೇವಿಸುವ ಕುಟುಂಬಗಳು ಇದ್ದವು. ಹಾಗಂತ ದಿನದ ಮೂರೂ ಹೊತ್ತು ಇದನ್ನೇ ಮಾಡುತ್ತಿದ್ದಾರೆಂದು ಅರ್ಥವಲ್ಲ, ಒಂದು ಹೊತ್ತು ಅನ್ನವನ್ನೋ ಗಂಜಿಯನ್ನೋ ಸೇವಿಸಿ, ಇನ್ನೊಂದು ಹೊತ್ತು ಇಂತಹ ತಿನಿಸುಗಳು ಮಳೆಗಾಲದ ಆಹಾರದ ಪದ್ಧತಿ ಎನಿಸಿತ್ತು.

ನಿರಂತರ ಸುರಿವ ಮಳೆ, ಹಲವು ದಿನಗಳ ಕಾಲ ಮೋಡದ ಮರೆಯಿಂದ ಹೊರಗೆ ಬಾರದ ಸೂರ್ಯ, ಥಂಡಿ ಗಾಳಿ, ಇವೆಲ್ಲವೂ ಹಲವು ರೋಗಗಳಿಗೆ ಹೇಳಿ ಮಾಡಿಸಿದ ವಾತಾವರಣ. ನೆಗಡಿ, ಜ್ವರ, ಕೆಮ್ಮು, ಶೀತ, ಮೈ ಕೈ ನೋವು ಇವೆಲ್ಲಾ ನಮ್ಮೂರಿನ ಮಳೆಗಾಲದಲ್ಲಿ ತೀರಾ ಸಾಮಾನ್ಯ. 1970ರ ದಶಕದ ತನಕ ನಮ್ಮ ಹಳ್ಳಿಯಲ್ಲಿ ಸಣ್ಣ ಪುಟ್ಟ ಕಾಯಿಲೆಗಳಿಗೆಲ್ಲ ಆಸ್ಪತ್ರೆಗೆ ಹೋಗುವ ಕ್ರಮ ಇರಲಿಲ್ಲ. ಜ್ವರ, ನೆಗಡಿಯಾದರೆ ಹಲವು ರೀತಿಯ ಕಷಾಯಗಳೇ ಚಿಕಿತ್ಸೆ.

ಮೆಣಸಿನಕಾಯಿ ಕಾಳಿನ ಕಷಾಯ, ಹಂಗಾರ ಕೆತ್ತೆ ಕಷಾಯ, ಶುಂಠಿ ಬೆಳ್ಳುಳ್ಳಿ ಕಷಾಯ – ಇವೇ ವಿವಿಧ ರೀತಿಯ ಜ್ವರಗಳಿಗೆ ಔಷಧ. ಮೆಣಸಿನಕಾಯಿ ಕಾಳಿನ ಕಷಾಯವಂತೂ ಎಲ್ಲಾ ಜ್ವರಗಳಿಗೆ ರಾಮಬಾಣವೆಂದೇ ನಮ್ಮ ಹಳ್ಳಿಯವರ ಅನಿಸಿಕೆ. ಜಾಸ್ತಿ ಜ್ವರ ಬಂದು, ನಾಲಿಗೆಯ ರುಚಿ ಕೆಟ್ಟು, ಊಟ ಸೇರದೆ ಇದ್ದಾಗ, ಹುರಿದ ಅಕ್ಕಿಯ ಗಂಜಿ ಮತ್ತು ಮಿಡಿ ಉಪ್ಪಿನಕಾಯಿ, ಜತೆಗೆ ಮೆಣಸಿನ ಕಾಳಿನ ಕಷಾಯವನ್ನು ದಿನದ ಮೂರು ಹೊತ್ತು ಸೇವಿಸಿದರೆ, ನಾಲ್ಕಾರು ದಿನಗಳಲ್ಲಿ ಜ್ವರ ವಾಸಿಯಾಗುತ್ತದೆ ಎಂಬ ದೃಢವಾದ ನಂಬಿಕೆಯೇ, ಅಂದಿನ ಜನರನ್ನು ಮುನ್ನಡೆಸುವ ಶಕ್ತಿಯಾಗಿತ್ತು.

ಮಳೆಗಾಲದಲ್ಲಿ ನಮ್ಮ ಹಳ್ಳಿಯ ಅಜ್ಜಿಯಂದಿರು ಬಳಸುತ್ತಿದ್ದ ಇನ್ನೊಂದು ಪ್ರಬಲ ಔಷಧ ಎಂದರೆ ಅರಿಸಿನ. ಕೆಪ್ಪಟರಾಯ ಅಥವಾ ಮಂಪ್ಸ್ ಆದಾಗ, ದತ್ತೂರದ ಬೀಜವನ್ನು ಅರಿಶಿನ ಪುಡಿಯ ಜೊತೆ ಚೆನ್ನಾಗಿ ತೇಯ್ದು, ಕಪಾಲದ ಭಾಗಕ್ಕೆ ಹಚ್ಚುತ್ತಿದ್ದರು. ಗಂಟಲು ನೋವಾದರೆ ಅರಸಿನ ಮತ್ತು ಮುದ್ದೆ ಬೆಲ್ಲವನ್ನು ಮಿಶ್ರಣ ಮಾಡಿ ಹಚ್ಚುವ ಕ್ರಮ.

ಸುಟ್ಟ ಗಾಯವಾದರೆ, ತೇಗದ ಎಲೆಯ ಕುಡಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಬಿಸಿ ಮಾಡಿ ಗಾಯಕ್ಕೆ ಹಚ್ಚುತ್ತಿದ್ದರು. ಕಿವಿ ನೋವಾದರೆ ಬೆಳ್ಳುಳ್ಳಿ ಮಿಶ್ರಿತ ಕೊಬ್ಬರಿ ಎಣ್ಣೆಯನ್ನು, ಸ್ವಲ್ಪ ಬಿಸಿ ಮಾಡಿ, ಕಿವಿಗೆ ಹಾಕಿದರೆ ಕಿವಿ ನೋವು ಮಾಯ! ಇಂತಹ ಕೆಲವು ಔಷಧಿಗಳು ಈಗಿನವರೆಗೆ ವಿಚಿತ್ರ ಎನಿಸಿದರೂ, ಅಂದು ಅವೇ ದಿವ್ಯ ಔಷಧ!

ಇದನ್ನೇಕೆ ಇಷ್ಟು ವಿವರವಾಗಿ ಹೇಳುತ್ತಿರುವೆ ಎಂದರೆ, ಮಳೆಗಾಲವಿದ್ದರೂ, ಆಗಿನ ದಿನಗಳಲ್ಲಿ ವೈದ್ಯರು, ಮಾತ್ರೆಗಳು, ಇಂಜೆಕ್ಷನ್ ಇಲ್ಲದೆ ದಿನಚರಿ ನಡೆಯುತ್ತಿತ್ತು ಎಂಬುದನ್ನು ಸೂಚಿಸಲು. ಜತೆಗೆ ಮೂರು ಅಥವಾ ನಾಲ್ಕು ತಿಂಗಳು ಸುರಿಯುತ್ತಿದ್ದ ಮಳೆಯಿಂದಾಗಿ, ಹಳ್ಳಿಗಳಿಂದ ಪೇಟೆಗೆ ಹೋಗಿ ಔಷಧ ತರುವ ವ್ಯವಧಾನವೂ ಇರುತ್ತಿರಲಿಲ್ಲ.

ನಂತರದ ದಶಕಗಳಲ್ಲಿ, ನಮ್ಮ ಹಳ್ಳಿಯಲ್ಲೂ ಪುಟ್ಟ ಆಸ್ಪತ್ರೆ ಆರಂಭವಾಗಿ, ಜನರು ಆಸ್ಪತ್ರೆಯತ್ತ ಮುಖ ಮಾಡಲು ಕಲಿತರು. ಹಾಗಂತ ಆ ಓಟ ಸುಲಭದ್ದಾಗಿರಲಿಲ್ಲ, ನಮ್ಮ ಮನೆಯಿಂದ ಮೂರು ಕಿ.ಮೀ. ದೂರದಲ್ಲಿದ್ದ ಅವರ ಕ್ಲಿನಿಕ್‌ಗೆ ಹೋಗಲು ಇದ್ದದ್ದು ಕಾಡುದಾರಿ ಮಾತ್ರ. ಮೊದಲಿಗೆ ಅರ್ಧ ಕಿಮೀ ಗದ್ದೆಯಂಚಿನ ದಾರಿ; ನಂತರ ಹರನ ಗುಡ್ಡ ಎಂಬ ನಿರ್ಜನ ಗುಡ್ಡದ ಮೇಲೆ ಕಾಲ್ದಾರಿ. ಬೈಲಿನಿಂದ ಗುಡ್ಡವೇರಲು, ಮುರಕಲ್ಲಿನ 120 ಮೆಟ್ಟಿಲುಗಳನ್ನು ಏರಬೇಕಿತ್ತು.

ಅಷ್ಟು ಕಷ್ಟಪಟ್ಟು ಹೋಗಿ, ಒಳ್ಳೆಯ ಕೈಗುಣ ಇದ್ದ ಕೈಗುಣವಿದ್ದ ಆ ಡಾಕ್ಟರ ಬಳಿ ಔಷಧ ತಂದರೆ, ಕಾಯಿಲೆ ವಾಸಿಯಾಗುತ್ತಿದ್ದು ಖಚಿತ ಎಂಬ ನಂಬಿಕೆ. ಆ ದಿನಗಳಲ್ಲಿ ಅವರು ಕೊಡುತ್ತಿದ್ದುದು ಕೆಂಪು ಬಣ್ಣದ ಔಷಧಿಗಳು, ಕೆಲವು ಮಾತ್ರೆಗಳು ಮಾತ್ರ. ಅವರ ಕ್ಲಿನಿಕ್ ಹೊರತುಪಡಿಸಿದರೆ, ನಮ್ಮ ಹಳ್ಳಿಯ ಆರು ಕಿ.ಮೀ. ಪಾಸಲೆಯಲ್ಲಿ ಬೇರೆ ಡಾಕ್ಟರ್ ಇರಲಿಲ್ಲ, ಆಸ್ಪತ್ರೆಯೂ ಇರಲಿಲ್ಲ.

ಆದ್ದರಿಂದಲೇ ಮಳೆಗಾಲದಲ್ಲಿ ವೈದ್ಯರನ್ನು ಹುಡುಕಿಕೊಂಡು ಹೋಗುವುದೆಂದರೂ ಅಂದಿನ ದಿನಗಳಲ್ಲಿ ಅದೊಂದು ಸಾಹಸ. ನಾಲ್ಕು ತಿಂಗಳು ಮಳೆ ಸುರಿಯುವ ಮಳೆಗಾಲವು, ನಮ್ಮ ಹಳ್ಳಿಯಲ್ಲಿ ಸಣ್ಣ ಮಟ್ಟದ ಖಳನಾಯಕ. ವಿಪರೀತ ಮಳೆ ಸುರಿದಾಗ, ಗದ್ದೆಯಂಚಿನ ತೋಡುಗಳಲ್ಲಿ ನೀರು ತುಂಬಿ, ಅವೆಲ್ಲವೂ ಗದ್ದೆಯ ಮೇಲೆ ಹರಿದು, ಬತ್ತದ ಸಸಿಗಳನ್ನು ಕಿತ್ತುಕೊಂಡು ಹೋಗುವುದುಂಟು.

ನಮ್ಮ ಮನೆ ತುಸು ಎತ್ತರದ ಜಾಗದಲ್ಲಿದ್ದುದರಿಂದ, ತೋಡಿನಲ್ಲಿ ದೊಡ್ಡ ನೆರೆ ಬಂದರೂ, ಮನೆಗೆ, ಜೀವಕ್ಕೆ ಅಪಾಯವಿರಲಿಲ್ಲ. ಆದರೆ, ನಮ್ಮ ಹಳ್ಳಿಯ ಎಲ್ಲರಿಗೂ ಇಂತಹ ಅನುಕೂಲವಿರಲಿಲ್ಲ; ನದಿಯಲ್ಲಿ ನೆರೆ ಬಂದರೆ, ನಮ್ಮ ಬಂಧುಗಳೊಬ್ಬರ ಮನೆಗೆ ನೀರು ನುಗ್ಗುತ್ತಿತ್ತು! ಅದು ಇನ್ನೊಂದು ರೀತಿಯ ಆತಂಕ!

ಅದೇನಿದ್ದರೂ, ಅಂದಿನ ಜನರ ಗ್ರಹಿಕೆಯಲ್ಲಿ, ಮಳೆಗಾಲವೆಂದರೆ ತೀರಾ ಕಷ್ಟದ ದಿನಗಳು ಎಂಬುದರಲ್ಲಿ ಎರಡುಮಾತಿಲ್ಲ. ಅದನ್ನು ನಮ್ಮೂರಿನವರು ಹೇಳುತ್ತಿದ್ದುದು ಹೀಗೆ: ವಯಸ್ಸಾದವರು ಇದೊಂದು ವರ್ಷ ಮಳೆಗಾಲದಲ್ಲಿ ಬದುಕಿ ಉಳಿದರೆ, ಇನ್ನು ಒಂದು ವರ್ಷ ತೊಂದರೆ ಇಲ್ಲ! ಹೀಗೆ, ಅನುಭವಜನ್ಯ ಕಟುಸತ್ಯವೊಂದು ನಮ್ಮೂರಿನಲ್ಲಿ ನಾಣ್ಣುಡಿಯ ಸ್ವರೂಪ ಪಡೆದಿತ್ತು.

ಮಧುರ ನೆನಪಿನ ಮಳೆಗಾಲವು ಕಷ್ಟದ ದಿನಗಳನ್ನು ಸಹ ಒಳಗೊಂಡಿದೆ ಎಂಬುದನ್ನು ಇದಕ್ಕಿಂತ ಸಮರ್ಪಕವಾಗಿ ಸೂಚಿಸುವ ಇನ್ನೊಂದು ನುಡಿಗಟ್ಟು ಇರಲಿಕ್ಕಿಲ್ಲ. ಈಗ ಕಾಲ ಬದಲಾಗಿದೆ; ಹಳ್ಳಿ ಪಟ್ಟಣಗಳಲ್ಲಿ ಕ್ಲಿನಿಕ್, ಆಸ್ಪತ್ರೆಗಳು ಬಂದಿವೆ.

ಬದಲಾಗಿರುವ ಸನ್ನಿವೇಶದಲ್ಲಿ ಕೆಲವು ಕಡೆ ಇನ್ನೊಂದೇ ವಿದ್ಯಮಾನವನ್ನು ಕಾಣಬಹುದು: ಸಣ್ಣ ಸಣ್ಣದಕ್ಕೆಲ್ಲಾ ವೈದ್ಯರ ಬಳಿ ಓಡುವುದು! ಆರೋಗ್ಯದ ವಿಚಾರ ದಲ್ಲಿ ನಿರ್ಲಕ್ಷ್ಯ ಮಾಡಬಾರದು ಎಂಬ ಕಾಳಜಿಯೇ, ಇಂತಹ ವಿದ್ಯಮಾನಕ್ಕೆ ಕಾರಣ. ಈ ರೀತಿಯ ಅತಿಕಾಳಜಿಯು ತಪ್ಪೋ ಸರಿಯೋ ಎಂದು ಈ ಕ್ಷಣದಲ್ಲಿ ಹೇಳಲಾರೆ; ಹಲವು ವರ್ಷಗಳ ನಂತರ, ಸಿಂಹಾವಲೋಕನ ಮಾಡಿದರೆ, ಇದು ಸರಿಯಾಗಿತ್ತೋ ಎಂದು ನಿರ್ಧರಿಸಲು ಸಾಧ್ಯ.

## ಮಿಂಚಿ ಮರೆಯಾದ ಬೆಳ್ಳಿಮೋಡ

ಕನ್ನಡದಲ್ಲಿ ವಿಶಿಷ್ಟ ಮನೋ ವೈಜ್ಞಾನಿಕ ಕಾದಂಬರಿಗಳನ್ನು ರಚಿಸಿದ ತ್ರಿವೇಣಿಯವರ ಜನ್ಮದಿನ ಸೆಪ್ಟೆಂಬರ್ 1.

ಕಳೆದ ಶತಮಾನದ 50ರ ದಶಕದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರ ಪ್ರವೇಶಿಸಿ ಕಾದಂಬರಿ ಲೋಕದಲ್ಲಿ ನೆಲೆ ಕಂಡುಕೊಂಡ ಲೇಖಕಿ ತ್ರಿವೇಣಿ. ಮೂರು ಕಥಾ ಸಂಕಲನಗಳು ಮತ್ತು 21 ಕಾದಂಬರಿಗಳನ್ನು ರಚಿಸಿ ಅನಾರೋಗ್ಯದಿಂದ ಬೇಗನೆ ನಮ್ಮನ್ನಗಲಿದರೂ, ಇಂದಿಗೂ ಕನ್ನಡ ಸಾಹಿತ್ಯಲೋಕದಲ್ಲಿ ಚಿರಸ್ಥಾಯಿ ಯಾಗಿ ಉಳಿದಿದ್ದಾರೆ. ಅದಕ್ಕೆ ಕಾರಣ ಅವರು ಆಯ್ಕೆ ಮಾಡಿಕೊಂಡ ವಸ್ತುಗಳ ಗಹನತೆ, ಕತೆಯ ಆಳ ಅಗಲಗಳು, ಅಂದಿನ ಕಾಲಕ್ಕೆ ಹೊಸತಾದ ಮನೋವಿಶ್ಲೇಷಣಾತ್ಮಕ ರಚನೆ, ನವಿರಾದ ಪ್ರೇಮ, ಪ್ರಣಯ, ಮಿತಿಮೀರದ ಬಂಡಾಯದ ಗುಣ.

ತ್ರಿವೇಣಿಯವರು ಸಾಮಾಜಿಕ, ಕೌಟುಂಬಿಕ, ಮನೋವೈಜ್ಞಾನಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಅವರ ಕಾದಂಬರಿಗಳು ಏಕಕಾಲಕ್ಕೆ ಕೌಟುಂಬಿಕ, ಮನೋವೈಜ್ಞಾನಿಕ ಕಾದಂಬರಿಗಳೂ ಆಗಿರಬಹುದು. ತ್ರಿವೇಣಿಯವರ ಎಲ್ಲಾ ಕೃತಿಗಳ ಕೇಂದ್ರ ಸ್ತ್ರೀಯರು. ಅಂದಿಗೆ ಹೊಸದಾದ ಮನೋ ವಿಜ್ಞಾನ ಸಂವೇದನೆಯನ್ನು ಸೃಜನಶೀಲ ಸಾಹಿತ್ಯದಲ್ಲಿ ದುಡಿಸಿಕೊಂಡಿದ್ದು, ತ್ರಿವೇಣಿಯವರ ಅಪರೂಪದ ಕಲಾಸೃಷ್ಟಿಗೆ ಸಾಕ್ಷಿಯಾಗಿದೆ. ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಮಹಿಳೆ ಅಪಾರ ಒತ್ತಡಗಳಿಗೆ ಒಳಗಾಗಿರುತ್ತಾಳೆ. ಪುರುಷ ಪ್ರಧಾನ ಸಮಾಜದಲ್ಲಿ ತಾಯಿಯಾಗಿ, ಹೆಂಡತಿಯಾಗಿ ಸೊಸೆಯಾಗಿ ಅವಳು ಪಡುವ ಯಾತನೆ ಅಸಾಧ್ಯವಾದುದು. ಈ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಹೆಣ್ಣು ಅನುಭವಿಸುವ ಮಾನಸಿಕ ಒತ್ತಡವೂ ಅಪಾರ. ಇಂತಹ ಸ್ಥಿತಿ ಅವಳನ್ನ ಮಾನಸಿಕ ಅಸ್ವಸ್ಥತೆಯತ್ತ ತಳ್ಳಬಹುದು. ತ್ರಿವೇಣಿ ಅವರಿಗೆ ಕೌಟುಂಬಿಕ ಒತ್ತಡದಲ್ಲಿ ಮಾನಸಿಕ ಅಸ್ವಸ್ಥರಾಗುವ ಮಹಿಳೆಯರ ಸ್ಥಿತಿಗಳು ತೀವ್ರವಾಗಿ ಕಾಡಿದಂತೆ ಕಂಡುಬರುತ್ತದೆ. ಅದಕ್ಕಾಗಿಯೇ ಏನೋ ಅವರು ತಮ್ಮ ಕಾದಂಬರಿಗಳಲ್ಲಿ ಮಾನಸಿಕ ಅಸ್ವಸ್ಥ ಮಹಿಳೆಯರ ಸ್ಥಿತಿಗತಿಗಳನ್ನು ಅತ್ಯಂತ ಕರುಣಾಜನಕವಾಗಿ ಕಟ್ಟಿಕೊಟ್ಟಿದ್ದಾರೆ.

ಮನೋವಿಜ್ಞಾನ ಮತ್ತು ಸಾಹಿತ್ಯ ಅಂತರ್ ಶಿಸ್ತಿನ ಕ್ಷೇತ್ರಗಳಾಗಿವೆ ಸಾಹಿತ್ಯ ಕೃತಿಯೊಂದು ಮನೋ ವಿಜ್ಞಾನವನ್ನು ಅಂತರ್ಗತ ಮಾಡಿಕೊಂಡಾಗ ಅದು ಕಟ್ಟಿಕೊಡುವ ಒಳನೋಟಗಳು ವಿಶೇಷವಾಗಿರುತ್ತವೆ ಎಂಬುದಕ್ಕೆ ತ್ರಿವೇಣಿಯವರ ಕಾದಂಬರಿಗಳೇ ಸಾಕ್ಷಿ. ಸಿಗ್ಮಂಡ್ ಫ್ರಾಯ್ಡ್, ಯೂಂಗ್, ಆಡ್ಲರ್ ಮುಂತಾದವರ ಮನೋವೈಜ್ಞಾನಿಕ ಸಿದ್ಧಾಂತಗಳು ತ್ರಿವೇಣಿಯವರ ಶರಪಂಜರ, ಬೆಕ್ಕಿನ ಕಣ್ಣು, ಮುಚ್ಚಿದ ಬಾಗಿಲು, ದೂರದ ಬೆಟ್ಟ ಕಾದಂಬರಿಗಳಲ್ಲಿ ಅಂತರ್ಗತವಾಗಿವೆ.



ಕನ್ನಡದಲ್ಲಿ ಮೊದಲ ಬಾರಿಗೆ ಮನೋವೈಜ್ಞಾನಿಕ ತಂತ್ರಗಳನ್ನು ಕಾದಂಬರಿಗಳಿಗೆ ತ್ರಿವೇಣಿ ಅವರ ಈ ಹೊಸ ದೃಷ್ಟಿಕೋನದ ಸಾಹಿತ್ಯ ಸೃಷ್ಟಿ ಅವರಿಗೆ ಅಪಾರ ಜನಪ್ರಿಯತೆಯನ್ನು ಗಳಿಸಿಕೊಟ್ಟಿತು. ಇವರು ತಮ್ಮ ಕೃತಿಗಳಲ್ಲಿ ಚರ್ಚಿಸಿರುವ ಮನೋರೋಗಗಳಾದ ಹಿಸ್ಟೀರಿಯಾ, ಖಿನ್ನತೆ, ಫೋಬಿಯಾ, ನಿದ್ರಾಹೀನತೆ, ನಿದ್ರಾಸಂಚಾರಗಳು ಅಂದಿನ ಕಾದಂಬರಿ ಪ್ರಪಂಚಕ್ಕೆ ಹೊಸದಾಗಿದ್ದವು.

ಈ ಮಾನಸಿಕ ಸಮಸ್ಯೆಗಳ ಕುರಿತು ಹೇಳುವಾಗ ಅವು ಕೇವಲ ಕೇಸ್ ಹಿಸ್ಟರಿಯಾಗದೆ ಮನಶ್ಶಾಸ್ತ್ರದ ತತ್ವಗಳಿಗೆ ಬದ್ಧವಾಗಿದ್ದು ಹಾಗೂ ಹೃದಯಸ್ಪರ್ಶಿ ಮಾನವೀಯ ದಾಖಲೆಗಳು ಆಗಿವೆ. ಅವರು ತಮ್ಮ ಕಾದಂಬರಿಗಳ ಮೂಲಕ ಮಾನಸಿಕವಾಗಿ ಅಸ್ವಸ್ಥರಾದವರ ಪರ ಹೊರಗಿನ ಸಮಾಜ ಕರುಣೆ, ಪ್ರೀತಿ, ಔದಾರ್ಯ, ನಿಸ್ವಾರ್ಥದಿಂದ ವರ್ತಿಸಬೇಕು ಎಂಬ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ, ಧಾರ್ಮಿಕ, ವೈಜ್ಞಾನಿಕ ಪ್ರಗತಿಯು ಮಾನವ ಜೀವನದ ಎಲ್ಲ ಕ್ಷೇತ್ರಗಳನ್ನು ಆವರಿಸಿದೆ. ಪ್ರಪಂಚದ ಇಂತಹ ಪರಿವರ್ತನೆಯ ಪ್ರಭಾವಕ್ಕೆ ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯ ಮೂಲಭೂತ ಅಂಶಗಳಾದ ಕುಟುಂಬ, ಜಾತಿ, ಧರ್ಮ, ಶಿಕ್ಷಣ, ಅಧಿಕಾರ ಎಲ್ಲವೂ ಒಳಗಾಗಿವೆ. ಮಹಿಳೆಯ ಬದುಕಿನ ಬದಲಾವಣೆಯ ಹಂತಗಳನ್ನು ಮತ್ತು ಇಂದಿನ ಮಹಿಳೆಯರ ಸಾಧನೆ ಮತ್ತು ಸಮಸ್ಯೆಗಳನ್ನು ಬಹಳ ಹಿಂದೆಯೇ ತ್ರಿವೇಣಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಇಂದಿನ ಮಹಿಳೆ ತನ್ನ ಹಿಂದೆ ಸೋದರನಾಗಿ, ತಂದೆಯಾಗಿ, ಪತಿಯಾಗಿ ಪುರುಷನ ಬೆಂಬಲ ಇರಬೇಕೆಂದು ಬಯಸುತ್ತಾಳೆ. ಆದರೆ ಅದು ರಕ್ಷಣೆ ಉದ್ದೇಶ ಹೊಂದಿರಬೇಕೇ ವಿನಃ ಶೋಷಣೆಯೂ ಆಗಬಾರದು ಎಂಬ ನಿರೀಕ್ಷೆ ಅವಳದು. ಇಂತಹ ಆಧುನಿಕ ಮಹಿಳೆಯ ಮನಸ್ಥಿತಿಯನ್ನು ಐವತ್ತರ ದಶಕದಲ್ಲಿ ತ್ರಿವೇಣಿ ತಮ್ಮ ಕಾದಂಬರಿಗಳಲ್ಲಿ ವಿವರಿಸಿದ್ದಾರೆ.

ಒಟ್ಟಾರೆಯಾಗಿ ಅನುಸೂಯಾ ಶಂಕರ್ (1.9.1928–29.7.1963) ಅವರು ತ್ರಿವೇಣಿ ಕಾವ್ಯನಾಮದಿಂದ ಕನ್ನಡ ಓದುಗರಿಗೆ ಚಿರಪರಿಚಿತರಾಗಿ ಸಾಹಿತ್ಯದಲ್ಲಿ ಹೊಸ ಲೋಕವನ್ನು ಪರಿಚಯಿಸಿದವರು. ಸ್ತ್ರೀವಾದಿ ಧೋರಣೆ, ಮನೋವೈಜ್ಞಾನಿಕ ವಿಶ್ಲೇಷಣೆಗಳಿಗೆ ಹೆಸರಾದ ಅವರ ಕಾದಂಬರಿಗಳು ಆಧುನಿಕ ಕನ್ನಡ ಗದ್ಯ ಬರವಣಿಗೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ತ್ರಿವೇಣಿ ಅವರು ಬದುಕಿದ್ದು ಅಲ್ಪಕಾಲವೇ ಆದರೂ ಕನ್ನಡಕ್ಕೆ ಅವರ ಕೊಡುಗೆ ಅಪರೂಪದ್ದು.

**– ಡಾ.ಅರ್ಚನಾ ಆರ್**

# ದೇಶಾದ್ಯಂತ ಪ್ರಮಾಣಿತ ಸಮಯ ಜಾರಿಗೆ ಸಿದ್ಧತೆ

• ಪ್ರಜೋದಯ ವರದಿ

**ನವದೆಹಲಿ:** ದೇಶಾದ್ಯಂತ ಏಕರೂಪ ಹಾಗೂ ನಿಖರವಾದ ಸಮಯ ಅನುಸರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಇನ್ನು 180 ದಿನಗಳ ಅವಧಿಯಲ್ಲಿ ಭಾರತೀಯ ಪ್ರಮಾಣಿತ ಸಮಯಕ್ಕೆ ಸಂಬಂಧಿಸಿದ ಹೊಸ ನಿಯಮಗಳು ಜಾರಿಗೆ ಬರಲಿದ್ದು, ಸರ್ಕಾರಿ ಇಲಾಖೆ, ಸಂಸ್ಥೆಗಳು ಹಾಗೂ ವಿವಿಧ ವಲಯಗಳು ಅಗತ್ಯ ತಾಂತ್ರಿಕ ಬದಲಾವಣೆ ಮಾಡಿಕೊಳ್ಳಬೇಕಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಆ.27ರಂದು ಕಾನೂನು ಮಾಪನಶಾಸ್ತ್ರ (ಭಾರತೀಯ ಪ್ರಮಾಣಿತ ಸಮಯ) ನಿಯಮಗಳು–2026 ಅಧಿಸೂಚನೆ ಹೊರಡಿಸಿದೆ. ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ 180 ದಿನಗಳ ಬಳಿಕ ಈ ನಿಯಮಗಳು ಜಾರಿಗೆ ಬರಲಿವೆ.

**ವಿದೇಶಿ ಸಮಯ ಮೂಲಗಳ ಮೇಲಿನ ಅವಲಂಬನೆ ಕಡಿಮೆ**

ಪ್ರಸ್ತುತ ಹಲವು ಡಿಜಿಟಲ್ ಹಾಗೂ ತಾಂತ್ರಿಕ ವ್ಯವಸ್ಥೆಗಳು ವಿದೇಶಿ ಉಪಗ್ರಹ ಆಧಾರಿತ ಸಮಯ ಮೂಲಗಳನ್ನು ಬಳಸುತ್ತಿವೆ. ಹೊಸ ವ್ಯವಸ್ಥೆಯ ಮೂಲಕ ಸ್ವದೇಶಿ ಉಪಗ್ರಹ ಸಂಚರಣೆ ವ್ಯವಸ್ಥೆ ಸೇರಿದಂತೆ ಅನುಮೋದಿತ ಭಾರತೀಯ ಸಮಯ ಮೂಲಗಳನ್ನು ಬಳಸಿಕೊಂಡು ನಿಖರವಾದ ಭಾರತೀಯ ಪ್ರಮಾಣಿತ ಸಮಯವನ್ನು ಪ್ರಸಾರ ಮಾಡಲು ಸರ್ಕಾರ ಮುಂದಾಗಿದೆ.

ಇದರಿಂದ ದೇಶದ ವಿವಿಧ ವಲಯಗಳಲ್ಲಿ ಒಂದೇ ನಿಖರ ಸಮಯವನ್ನು ಉಲ್ಲೇಖಿಸುವ ವ್ಯವಸ್ಥೆ ಬಲಪಡಲಿದೆ. ಬ್ಯಾಂಕಿಂಗ್, ಡಿಜಿಟಲ್ ಪಾವತಿ, ದೂರಸಂಪರ್ಕ, ರೈಲ್ವೆ, ವಿಮಾನ ನಿಲ್ದಾಣ, ವಿದ್ಯುತ್ ವ್ಯವಸ್ಥೆ, ಕಂಪ್ಯೂಟರ್ ನೆಟ್‌ವರ್ಕ್‌ಗಳು ಹಾಗೂ ಸರ್ಕಾರಿ ದಾಖಲೆಗಳಲ್ಲಿ ನಿಖರ ಸಮಯ ಮತ್ತು ಸಮಯದ ಮುದ್ರೆಗಳ ಬಳಕೆ ಮತ್ತಷ್ಟು ವಿಶ್ವಾಸಾರ್ಹವಾಗಲಿದೆ.

**180 ದಿನಗಳಲ್ಲಿ ತಾಂತ್ರಿಕ ಬದಲಾವಣೆ:** ಹೊಸ ನಿಯಮಗಳು ಜಾರಿಗೆ ಬರುವ ಮುನ್ನ ಸರ್ಕಾರಿ ಇಲಾಖೆಗಳು, ವ್ಯವಹಾರ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ಇತರ ಸಂಬಂಧಿತ ಸಂಸ್ಥೆಗಳು ತಮ್ಮ ವ್ಯವಸ್ಥೆಗಳನ್ನು ಪರಿಶೀಲಿಸಬೇಕು. ಅಗತ್ಯವಿರುವ ತಾಂತ್ರಿಕ ಬದಲಾವಣೆಗಳನ್ನು ಕೈಗೊಂಡು ಭಾರತೀಯ ಪ್ರಮಾಣಿತ ಸಮಯವನ್ನು ಅಳವಡಿಸಿಕೊಳ್ಳಲು 180 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ.

ದೇಶಾದ್ಯಂತ ಭಾರತೀಯ ಸಂಸ್ಥೆಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಪ್ರಯೋಗಾಲಯಗಳ ಮೂಲಕ ನಿಖರವಾದ ಪ್ರಸಾರಕ್ಕೆ ಅಗತ್ಯ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

**ಬೆಂಗಳೂರಿನಲ್ಲಿ ಪ್ರಸರಣದ ಪ್ರದರ್ಶನ:**

ಒನ್ ನೇಷನ್ ಒನ್ ಟೈಮ್ ಉಪಕ್ರಮದ ಭಾಗವಾಗಿ ಜುಲೈ 2026ರಲ್ಲಿ ಬೆಂಗಳೂರಿನ ಪ್ರಾದೇಶಿಕ ಉಲ್ಲೇಖ ಪ್ರಮಾಣಿತ ಪ್ರಯೋಗಾಲಯದಲ್ಲಿ ಭಾರತೀಯ ಪ್ರಮಾಣಿತ ಸಮಯ ಪ್ರಸರಣದ ಪ್ರದರ್ಶನ ಜಾಲವನ್ನು ನಿಯೋಜಿಸಲಾಗಿತ್ತು. ಈ ವ್ಯವಸ್ಥೆಯ ಮೂಲಕ ಬ್ಯಾಂಕಿಂಗ್, ದೂರಸಂಪರ್ಕ, ವಿದ್ಯುತ್, ಸಾರಿಗೆ ಮತ್ತು ಡಿಜಿಟಲ್ ಆಡಳಿತ ಸೇರಿದಂತೆ ಹಲವು ಕ್ಷೇತ್ರಗಳಿಗೆ ಭಾರತೀಯ ಪ್ರಮಾಣಿತ ಸಮಯವನ್ನು ಪ್ರಸಾರ ಮಾಡುವ ಸಾಮರ್ಥ್ಯವನ್ನು ಪ್ರದರ್ಶಿಸಲಾಗಿದೆ.

ಬೆಂಗಳೂರಿನ ಮತ್ತು ಚೆನ್ನೈನ ನಡುವೆ ಯ ಸುರಕ್ಷಿತ ಪ್ರಸರಣವನ್ನೂ ಪ್ರದರ್ಶಿಸಲಾಗಿದೆ. ಈ ಯೋಜನೆಯಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಸೇರಿದಂತೆ ಹಲವು ಸಂಸ್ಥೆಗಳು ಸಹಭಾಗಿತ್ವ ವಹಿಸಿವೆ.

**ಸಚಿವ ಪ್ರಲ್ಹಾದ್ ಜೋಶಿ ನಿರ್ದೇಶನ**

ಒನ್ ನೇಷನ್ ಒನ್ ಟೈಮ್ ಉಪಕ್ರಮದ ಅನುಸರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಸೂಚಿಸಿದ್ದಾರೆ.

180 ದಿನಗಳ ಅವಧಿಯಲ್ಲಿ ಎಲ್ಲ ಪಾಲುದಾರರು ಅಗತ್ಯ ತಾಂತ್ರಿಕ ಬದಲಾವಣೆಗಳನ್ನು ಪೂರ್ಣಗೊಳಿಸಿ, ಸ್ವದೇಶಿ ಉಪಗ್ರಹ ಆಧಾರಿತ ನಿಖರ ಅನುಷ್ಠಾನಕ್ಕೆ ಸಿದ್ಧರಾಗಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ.

## ಬೆಂಗಳೂರಿನಲ್ಲಿ ಪ್ರಸರಣ ವ್ಯವಸ್ಥೆ ಪ್ರದರ್ಶನ



# ವಿದ್ಯಾನಗರದಲ್ಲಿ 14 ಅಡಿ ಎತ್ತರದ ಮಣ್ಣಿನ ಗಣಪತಿ

• ಪ್ರಜೋದಯ ವರದಿ

**ಹಾಸನ:** ಇಲ್ಲಿನ ವಿದ್ಯಾನಗರದ ಕುವೆಂಪು ಯುವಕರ ಸಂಘವು ಈ ಬಾರಿಯ ಗಣೇಶೋತ್ಸವವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಮೂಲಕ ಮಾದರಿಯಾಗುವುದಕ್ಕೆ ಸಜ್ಜಾಗಿದೆ.

ಸಂಘದ ವತಿಯಿಂದ 14 ಅಡಿ ಎತ್ತರದ 'ಹಾಸನ್ ಅಧಿರಾಜ್' ಎಂಬ ಮಣ್ಣಿನ ಗಣಪತಿ ವಿಗ್ರಹವನ್ನು ಸ್ಥಾಪಿಸಲು ಉದ್ದೇಶಿಸಿ ಗಣಪತಿ ಮೂರ್ತಿಯನ್ನು ತರಲು

ಸಂಘವು ತೆರಳಿದೆ. ಇನ್ನು ಸೆ. 14ರಂದು ಆರಂಭವಾಗುವ ಈ ಉತ್ಸವವು ಸೆ. 16 ರವರೆಗೆ ವಿಜೃಂಭಣೆಯಿಂದ ನಡೆಯಲಿದೆ. ವಿದ್ಯಾನಗರ ಜನರ ಸಹಯೋಗದಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮವು ಪರಿಸರ ಪ್ರಜ್ಞೆಯೊಂದಿಗೆ ಆಚರಣೆಯ ಸಂಕಲ್ಪವನ್ನು ಮತ್ತು ಸಾಂಪ್ರದಾಯಿಕ ನಂಬಿಕೆಯನ್ನು ಸಮನ್ವಯಗೊಳಿಸಿದೆ.

ರಾಜ್ಯ ಸರ್ಕಾರವು ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ರಾಸಾಯನಿಕ ಬಣ್ಣಗಳಿಂದ ತಯಾರಿಸಿದ ವಿಗ್ರಹಗಳ ತಯಾರಿಕೆ, ಸಂಗ್ರಹ, ಮಾರಾಟ ಮತ್ತು ಸಾರ್ವಜನಿಕ ಪ್ರದರ್ಶನದ ಮೇಲೆ ಸಂಪೂರ್ಣ ನಿಷೇಧ ಹೇರಿರುವ ಹಿನ್ನಲೆಯಲ್ಲಿ ಈ ನಿರ್ಧಾರ ಮಹತ್ವ ಪಡೆದುಕೊಂಡಿದೆ.

# 40 ಕೋಟಿ ರೂ. ವೆಚ್ಚದಲ್ಲಿ ಮಾದರಿ ಕಲಾಗ್ರಾಮ

## ಜಾಗಕ್ಕಾಗಿ ರಾಜ್ಯ ಸರ್ಕಾರಕ್ಕೆ ಮನವಿ: ಕ.ರ.ವೇ. ಅಧ್ಯಕ್ಷ ನಾರಾಯಣಗೌಡ

• ಪ್ರಜೋದಯ ವರದಿ



**ಅರಸೀಕೆರೆ:** ರಾಜ್ಯದಲ್ಲಿ ಸುಮಾರು 10 ಎಕರೆ ಜಾಗದಲ್ಲಿ ಜಾನಪದ ಕಲಾಗ್ರಾಮ ಮಾಡಲು ರಾಜ್ಯ ಸರ್ಕಾರದಿಂದ ಜಾಗ ಕೇಳಲಾಗಿದ್ದು, 30–40 ಕೋಟಿ ರೂ. ವೆಚ್ಚದಲ್ಲಿ ಮಾದರಿ ಕಲಾಗ್ರಾಮ ನಿರ್ಮಾಣ ಮಾಡುವ ದೊಡ್ಡ ಕನಸು ನನ್ನದು ಎಂದು ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಸ್ಥಾನದಲ್ಲಿ ಬಿಟ್ಟರೆ ದೇಶದ ಎಲ್ಲಿಯೂ ಕಲಾಗ್ರಾಮ ಇಲ್ಲ, ವ್ಯಕ್ತಿ ಮುಖ್ಯವಲ್ಲ, ಆತ ಮಾಡಿದ ಕೆಲಸ, ಉಳಿಸಿಹೋದ ಸಾಕ್ಷಿಗುಡ್ಡೆ ಮುಖ್ಯ. ಅದಕ್ಕಾಗಿ ಇಂಥದ್ದೊಂದು ತೀರ್ಮಾನ ಮಾಡಿದ್ದೇನೆ, ಉಚಿತವಾಗಿ ಬೇಡ, ರಿಯಾಯ್ತಿ ದರದಲ್ಲಿ ಕೊಡಿ ಎಂದು ಕೇಳಿದ್ದೇನೆ. ಕಲಾಗ್ರಾಮದ ಮೂಲಕ ಜಾನಪದ ವಿವಿಧ ಪ್ರಕಾರ, ಹಾಡುಗಳ ಬಗ್ಗೆ ತರಬೇತಿ ನೀಡುವುದು, ಅಲ್ಲೇ ವಸತಿ, ಊಟದ ವ್ಯವಸ್ಥೆ ಕಲ್ಪಿಸಿ ಜಾನಪದ ಕಲೆಯನ್ನು ಮಕ್ಕಳಿಗೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಬೆಂಗಳೂರಿನಲ್ಲಿ 130X80 ಅಡಿ ಅಳತೆಯಲ್ಲಿ ಕರವೇ ಸ್ವಂತ ಕಟ್ಟಡ ಕಟ್ಟಲಾಗುತ್ತಿದೆ. ಈ ಮೂಲಕ ರಾಜ್ಯದ ವಿವಿಧೆಡೆಗಳಿಂದ ಬರುವ ಜಿಲ್ಲಾಧ್ಯಕ್ಷರು, ರಾಜ್ಯ ಪದಾಧಿಕಾರಿಗಳಿಗೆ ಉಳಿದುಕೊಳ್ಳಲು ಹಾಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಇದಕ್ಕಾಗಿ ಆರ್ಥಿಕ ಸಂಪನ್ಮೂಲ ಸಂಗ್ರಹಿಸಲು ಸೆ.26 ರಂದು ಹಾಸನದ ಕಲಾಭವನದಲ್ಲಿ ರಸಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧ್ಯಕ್ಷ ಸಿ.ಡಿ.ಮನುಕುಮಾರ್ ಅವರ ನೇತೃತ್ವದಲ್ಲಿ ಸಂಜೆ 5 ಗಂಟೆಯಿಂದ ರಸಸಂಜೆ ಶುರುವಾಗಲಿದೆ. ರಾಜ್ಯದ 35 ಜಿಲ್ಲೆಯಲ್ಲೂ ಇಂತಹ ಕಾರ್ಯಕ್ರಮ ಮಾಡಲಾಗುತ್ತಿದೆ. ಅಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಅಭಿನಂದನಾ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 10 ಮಂದಿಗೆ ಕರ್ನಾಟಕ ಸಾರ್ವಭೌಮ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಅರಸೀಕೆರೆಯಲ್ಲಿ ಮೂರು ದಿನಗಳ ಅರಸೀ ಉತ್ಸವ ನಡೆಸಲು ಸಚಿವರು ತೀರ್ಮಾನಿಸಿದ್ದು, ಇದಕ್ಕೆ ಕೈ ಜೋಡಿಸುವಂತೆ ಸಚಿವರು ಮನವಿ ಮಾಡಿದ್ದಾರೆ. ನಾವೆಲ್ಲರೂ ಒಗ್ಗೂಡಿ ಅರಸೀಕೆರೆ ಇತಿಹಾಸದಲ್ಲೇ ಮೊದಲ ಬಾರಿಗೆ ಅದ್ದೂರಿ ಕಾರ್ಯಕ್ರಮ ಮಾಡಲು ಯೋಜಿಸಲಾಗಿದೆ. ಸಚಿವರ ಸಾರಥ್ಯದಲ್ಲೇ ಸಮಿತಿ ರಚನೆ ಮಾಡಿ ದೊಡ್ಡ ಕಾರ್ಯಕ್ರಮ ಮಾಡಲಾಗುವುದು ಎಂದರು.

ಕ.ರ.ವೇ. ಜಿಲ್ಲಾಧ್ಯಕ್ಷ ಸಿ.ಡಿ.ಮನುಕುಮಾರ್, ತಾಲ್ಲೂಕು ಅಧ್ಯಕ್ಷ ಕಿರಣ್‌ಕುಮಾರ್, ನಗರಾಧ್ಯಕ್ಷ ಸಂತೋಷ್. ಮುಖಂಡರಾದ ತುಳಸಿದಾಸ್, ಮಂಜುನಾಥ್, ರಘು ಮೊದಲಾದವರಿದ್ದರು.

# ವಿಶ್ವದ ಆರ್ಥಿಕತೆಯ ಜ್ಞಾನ ಹೊಂದಬೇಕು

• ಪ್ರಜೋದಯ ವರದಿ

**ಹಾಸನ:** ಪದವಿ ಹಂತದಿಂದಲೇ ಅರ್ಥಶಾಸ್ತ್ರದ ವಿದ್ಯಾರ್ಥಿಗಳು ದೇಶದ ಹಾಗೂ ವಿಶ್ವದ ಆರ್ಥಿಕತೆಯ ಬಗ್ಗೆ ಜ್ಞಾನ ಹೊಂದಬೇಕು ಎಂದು ಸರ್ಕಾರಿ ಕಲಾ ವಾಣಿಜ್ಯ ಹಾಗೂ ಸ್ನಾತಕೋತ್ತರ ಕಾಲೇಜಿನ ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಡಿ.ದೀಪ ಹೇಳಿದರು.

ನಗರದ ಆರ್.ಸಿ. ರಸ್ತೆಯ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಭಾರತದಲ್ಲಿ ಡಿಜಿಟಲ್ ಆರ್ಥಿಕತೆ ಮತ್ತು ಆರ್ಥಿಕ ಪರಿವರ್ತನೆ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪೈಕಿ ಭಾರತ ಮುಂಚೂಣಿಯಲ್ಲಿದ್ದು, ದೇಶದ ಬೆಳವಣಿಗೆಗೆ ಆರ್ಥಿಕ ಪ್ರಗತಿ ಸಹಕಾರಿಯಾಗಿದೆ ಎಂ ದರು.

ದೇಶದಲ್ಲಿ ಆರ್ಥಿಕತೆ ಬೆಳವಣಿಗೆಗೆ ಡಿಜಿಟಲ್ ತಂತ್ರಜ್ಞಾನ ಅವಳವಡಿಕೆ



ಮಾಡಿಕೊಂಡ ನಂತರ ಹಲವು ಬದಲಾವಣೆಗಳು ಉಂಟಾಗಿದ್ದು, ದೇಶದ ಪ್ರಗತಿ ಮತ್ತಷ್ಟು ವೇಗವಾಗಿ ಬೆಳೆಯಲು ಸಹಕಾರಿಯಾಗಿದೆ. ಪದವಿ ಹಂತದಲ್ಲಿ ಅರ್ಥಶಾಸ್ತ್ರ ವಿಷಯ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಅರ್ಥಿಕತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು. ಪಠ್ಯದೊಂದಿಗೆ ದೇಶದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದಂತೆ ವಿಷಯಗಳನ್ನು ಸಂಗ್ರಹಿಸಿ ಅದರ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ಮಾನವರ ಜೀವನದಲ್ಲಿ ಅರ್ಥಶಾಸ್ತ್ರವು ಮುಖ್ಯ ಪಾತ್ರವನ್ನು ವಹಿಸಿದೆ, ಒಂದು ಉತ್ತಮ ಬದುಕು ಸಾಗಿಸಲು ಅರ್ಥಶಾಸ್ತ್ರವು ತುಂಬ ಮುಖ್ಯವಾಗಿರುತ್ತದೆ. ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಅರ್ಥಶಾಸ್ತ್ರದಲ್ಲಿ ಹೆಚ್ಚು ಸಾಧನೆ ಮಾಡಬೇಕು ಎಂದು ತಿಳಿಸಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಹೇಮಾವತಿ ಎಂ.ವಿ., ಐ.ಕ್ಯೂ.ಎ.ಸಿ. ಸಂಚಾಲಕ ಡಾ.ಕಾಂತೇಶ್, ಅಧ್ಯಾಪಕ ಜಿ.ಆರ್.ಮೋಹನ್‌ಕುಮಾರ್, ಡಾ. ಮರಿರಾಜ್ ಸೇಡಂ ಇತರರಿದ್ದರು.

# ಅಕ್ರಮ ಭೂ ಮಂಜೂರಾತಿ ರದ್ದತಿಗೆ ಮುಷ್ಕರದ ಎಚ್ಚರಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೆಳಗೋಡು ಹೋಬಳಿಯ ಯಡೇಹಳ್ಳಿ ಗ್ರಾಮದ ಸರ್ವೆ ನಂ.207/2ಸಿ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸುವಂತೆ ಆಗ್ರಹಿಸಿ ಉಪವಿಭಾಗಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಜಿಲ್ಲಾ ಆದಿದ್ರಾವಿಡ ತುಳು ಸಮಾಜ ಸೇವಾ ಸಂಘದ ಜಿಲ್ಲಾಧ್ಯಕ್ಷ ಬಿ. ಶಂಕರ್ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕರ್ನಾಟಕ ಭೂ ಕಂದಾಯ ಅಧಿನಿಯಮ1966ರ ಕಲಂ 108(ಎಫ್)ನಲ್ಲಿರುವ ಮಂಜೂರಾತಿ ಅರ್ಹತೆಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದರು. ಈ ಕುರಿತು ಗ್ರಾಮಸ್ಥರ ಪರವಾಗಿ ತಹಸೀಲ್ದಾರ್‌ಗೆ ದೂರು ನೀಡಲಾಗಿದ್ದು, ಗ್ರಾಮ ಆಡಳಿತಾಧಿಕಾರಿ ಹಾಗೂ ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ ಜೂನ್ 9ರಂದು ವರದಿ ಸಲ್ಲಿಸಿದ್ದಾರೆ ಎಂದರು.

ವರದಿಯ ಪ್ರಕಾರ, ಮಂಜೂರಿದಾರರಾದ ಇಂದಿರಾ ಬಿ.ಅಮೀನ್ ಯಡೇಹಳ್ಳಿ ಗ್ರಾಮದ ನಿವಾಸಿಯಾಗಿರಲಿಲ್ಲ. ಅವರನ್ನು ಮಹಾರಾಷ್ಟ್ರಕ್ಕೆ ವಿವಾಹ ಮಾಡಿಕೊಡಲಾಗಿದ್ದು, ಅವರ ಹೆಸರಿನಲ್ಲಿ ನಮೂನೆ53ರ ಅರ್ಜಿ ಸಲ್ಲಿಸಲಾಗಿದೆ. ಅರ್ಜಿಯಲ್ಲಿ ಅವರ ಸಹಿ ಇಲ್ಲದಿರುವುದಲ್ಲದೆ, 63 ವರ್ಷ ವಯಸ್ಸು ಎಂದು ನಮೂದಿಸಲಾಗಿದೆ. ಆದರೆ 2017ರಲ್ಲಿ ಮಂಜೂರಾತಿ ನೀಡುವ ಸಂದರ್ಭದಲ್ಲಿ ಅವರಿಗೆ 80 ವರ್ಷಕ್ಕೂ ಅಧಿಕ ವಯಸ್ಸಾಗಿತ್ತು ಹಾಗೂ ಜಮೀನನ್ನು ಸ್ವಯಂ ಸಾಗುವಳಿ ಮಾಡುತ್ತಿರಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅವರು ಕರ್ನಾಟಕದ ನಿವಾಸಿಯಾಗಿದ್ದರು ಎಂಬುದಕ್ಕೆ ದಾಖಲೆಗ ಳಿಲ್ಲ ಎಂದು ಶಂಕರ್ ಹೇಳಿದರು.

ಮಂಜೂರಾತಿ 2.10 ಎಕರೆ ಇದ್ದರೂ ಸ್ಥಳ ಪರಿಶೀಲನೆ ವೇಳೆ 4 ಎಕರೆ ವಿಸ್ತೀರ್ಣದ ಅಕ್ರಮ ನಕ್ಷೆ ತಯಾರಿಸಿರುವುದು ಕಂಡುಬಂದಿದೆ. ಇಂದಿರಾ ಬಿ. ಅಮೀನ್ ಅವರ ಮರಣದ ಬಳಿಕ ಆರು ಮಕ್ಕಳ ಪೈಕಿ ನವೀನ್ ಬಿ. ಅಮೀನ್ ಅವರ ಹೆಸರಿಗಷ್ಟೇ ಪೌತಿ ಖಾತೆ ಮಾಡಲಾಗಿದೆ. ಜಮೀನಿನ ಮೇಲೆ ಯಡೇಹಳ್ಳಿ ಗ್ರಾಮಸ್ಥರು ಸ್ವಾಧೀನ ಹೊಂದಿದ್ದು, ನಮೂನೆ53 ಹಾಗೂ 57ರಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದು ತಿಳಿಸಿದರು.



ಪ್ರಕರಣದ ಕುರಿತು ಹಲವು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಆದ್ದರಿಂದ ಸರ್ವೆ ನಂ.207/2ಸಿ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸಿ, ದಾಖಲೆಗಳು ಹಾಗೂ ಜಮೀನಿನ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಬೇಡಿಕೆ ಈಡೇರದಿದ್ದರೆ ಉಪವಿಭಾಗಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಲೂರು ತಾಲ್ಲೂಕಿನ ಅಧ್ಯಕ್ಷ ಸುಬ್ರಮಣ್ಯ, ಜಿಲ್ಲಾ ಸಂಚಾಲಕ ಸೋಮಶೇಖರ್, ಸಂಚಾಲಕ ಮಂಜುನಾಥ್ ಇದ್ದರು.

# ನಿವೃತ್ತ ಚಂದ್ರೇಗೌಡರಿಗೆ ಸನ್ಮಾನ



• ಪ್ರಜೋದಯ ವರದಿ

**ಅರಸೀಕೆರೆ:** ನಗರದ ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆ ಸೇರಿದಂತೆ ತಾಲೂಕಿನ ಹಾರನಹಳ್ಳಿ, ಬಾಣಾವರ ಹಾಗೂ ನೆರೆಯ ಕಡೂರು ಸರ್ಕಾರಿ ಆಸ್ಪತ್ರೆ ಹೀಗೆ ಹಲವು ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ವಯೋ ನಿವೃತ್ತರಾದ ಚಂದ್ರೇಗೌಡರನ್ನು ಆರೋಗ್ಯ ಇಲಾಖೆಯ ಸಿಬ್ಬಂದಿ ಮತ್ತು ಅವರ ಸ್ನೇಹಿತರ ಬಳಗ ಆತ್ಮೀಯವಾಗಿ ಸನ್ಮಾನಿಸಿ ಶುಭ ಹಾರೈಸಿದರು.

ಸ್ನೇಹಿತರ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಚಂದ್ರೇಗೌಡ, ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ಎಂದರೆ ಭಗವಂತನ ಸೇವೆ ಮಾಡಿದಂತೆ ಅದರಲ್ಲೂ ಸರ್ಕಾರಿ ಆಸ್ಪತ್ರೆ ಎಂದರೆ ಬಡವರು ಮತ್ತು ಮಧ್ಯಮ ವರ್ಗದ ಜನತೆಯ ಆರೋಗ್ಯಕ್ಕೆ ಆಧಾರ ಸ್ಥಂಬ ಎಂದು ನುಡಿದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನವೀನ್‌ಕುಮಾರ್, ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಕಿರಣ್ ಕುಮಾರ್, ಆರೋಗ್ಯ ಇಲಾಖೆ ಸಿಬ್ಬಂದಿಗಳು ಇನ್ನಿತರರು ಉಪಸ್ಥಿತರಿದ್ದರು.

# ಅಕ್ರಮ ಖಾತೆ ಸೃಷ್ಟಿಸಿ ಕಟ್ಟಡ ಪರವಾನಗಿ: ಆರೋಪ

• ಪ್ರಜೋದಯ ವರದಿ

ಸಕಲೇಶಪುರ: ವಿವಾದಿತ ಜಾಗಕ್ಕೆ ಅಕ್ರಮವಾಗಿ ಖಾತೆ ಸೃಷ್ಟಿಸಿ ಕಟ್ಟಡ ಪರವಾನಗಿ ನೀಡಲಾಗಿದೆ ಎಂದು ಭೂಮಿಯ ಹಕ್ಕುದಾರ ಹೆಚ್.ಆರ್. ಅಶೋಕ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಹಾನುಬಾಳು ಗ್ರಾಮದ ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾದಿಗೆ ಗ್ರಾಮದಲ್ಲಿ ಕಾನೂನು ಬಾಹಿರವಾಗಿ ಅನುಮತಿ ಪಡೆದು ಕಟ್ಟಡ ನಿರ್ಮಾಣ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ಹಾದಿಗೆ ಗ್ರಾಮದ ಸರ್ವೆ ನಂ.10/4ಕ್ಕೆ ಸಂಬಂಧಿಸಿದಂತೆ ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಲಯದ 10/2008ರ ಪ್ರಕರಣದ ಆದೇಶದಂತೆ ತಮಗೆ ಹಕ್ಕು ದೊರೆತಿದ್ದು, ಆರ್‌ಟಿಸಿಯಲ್ಲಿಯೂ ತಮ್ಮ ಹೆಸರು ದಾಖಲಾಗಿತ್ತು. ಈ ಜಾಗಕ್ಕೆ ಸಂಬಂಧಿಸಿದ ದಾಖಲೆಗಳು ತಮ್ಮ ಬಳಿ ಇವೆ ಎಂದು ತಿಳಿಸಿದರು.

ಕೆ.ಎಸ್.ಉಮೇಶ್ ಹಾಗೂ ತುಳಸಿ ಅವರು ಮಂಜಪ್ಪ ಅವರ ಹೆಸರಿನಲ್ಲಿ ಈ ಜಾಗಕ್ಕೆ ಸಂಬಂದಿಸಿದಂತೆ ಅಕ್ರಮ ಖಾತೆಯನ್ನು ಸೃಷ್ಟಿಸಿ ನಂತರ



ಕಾನೂನು ದುರುಪಯೋಗಪಡಿಸಿಕೊಂಡು ಕಾನೂನುಬಾಹಿರವಾಗಿ ಅಕ್ರಮ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಈ ಕುರಿತು ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಈ ಹಿಂದೆಯೇ ನಡವಳಿ ನಡೆದಿದ್ದರೂ, ಅದನ್ನು ಗಣನೆಗೆ ತೆಗೆದುಕೊಳ್ಳದೆ, ಪಂಚಾಯತ್ ಕಾಯ್ದೆಯ ವಿರುದ್ಧವಾಗಿ ತೆರಿಗೆ ಸ್ವೀಕರಿಸಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಿರುವುದು ನಿಯಮ ಬಾಹಿರ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಬಾಕಿ ಇರುವಾಗಲೇ ಕಟ್ಟಡ ಕಾಮಗಾರಿಗೆ ಅವಕಾಶ ನೀಡಲಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಹಾಗೂ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ವಿವಾದಿತ ಜಾಗದಲ್ಲಿ ನಡೆಯುತ್ತಿರುವ ಕಟ್ಟಡ ಕಾಮಗಾರಿಯನ್ನು ತಕ್ಷಣ ಸ್ಥಗಿತಗೊಳಿಸಿ, ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದೆ, ಜೊತೆಗೆ ಲೋಕಾಯುಕ್ತಕ್ಕೂ ದೂರು ಸಲ್ಲಿಸಲಾಗುವುದು ಎಂದು ಹೇಳಿದರಲ್ಲದೆ, ಅಕ್ರಮದಲ್ಲಿ ಹಾಲಿ ಪಿಡಿಒ ಮತ್ತು ಈ ಹಿಂದಿನ ಪಿಡಿಒ ಕೈವಾಡ ಇದೆ ಎಂದು ಆರೋಪಿಸಿದರು.

ಮಂಜಪ್ಪ ಮಾತನಾಡಿ, ತಾನು ಅನಕ್ಷರಸ್ಥನಾಗಿದ್ದು, ಕೆಲವರು ನೀಡಿದ ಮಾಹಿತಿಯ ಮೇರೆಗೆ ದಾಖಲೆಗಳಿಗೆ ಸಹಿ ಮಾಡಿದ್ದೆ. ಬಳಿಕ ತನ್ನ ಹೆಸರಿನಲ್ಲಿ ಖಾತೆ ಮಾಡಿಸಿ, ನಂತರ ತನ್ನ ಹೆಸರಿನಿಂದ ಉಮೇಶ್ ಹಾಗೂ ತುಳಸಿ ಅವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿರುವುದು ತಿಳಿದುಬಂದಿದೆ. ಈ ಪ್ರಕ್ರಿಯೆ ಬಗ್ಗೆ ತನಗೆ ಸಂಪೂರ್ಣ ಮಾಹಿತಿ ಇರಲಿಲ್ಲ, ನನ್ನ ಮುಗ್ಧತೆ ಹಾಗೂ ಸಾಮಾನ್ಯ ಜ್ಞಾನದ ಕೊರತೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ನಾನು ದೇವಸ್ಥಾನದ ಅರ್ಚಕನಾಗಿ ಕೆಲಸ ಮಾಡಿಕೊಂಡಿದ್ದೆ, ನನಗೆ ಅಶೋಕ್ ಅವರ ತಂದೆಯವರು ವಾಸ ಮಾಡಲು ಸ್ಥಳಾವಕಾಶ ಮಾಡಿಕೊಟ್ಟಿದ್ದರು. ನಾನು ವಾಸವಾಗಿದ್ದನ್ನೇ ಆಧಾರವಾಗಿರಿಸಿಕೊಂಡು ಈ ರೀತಿಯ ಅಕ್ರಮ ಮಾಡಿದ್ದಾರೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಸದಸ್ಯ ಆಕಾಶ್ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಲ್ಲಿ ನಡವಳಿ ನಡೆಸಲಾಗಿದ್ದು, ತುಳಸಿ ಹಾಗೂ ಉಮೇಶ್ ಅವರ ಹೆಸರಿಗೆ ಮಾಡಿರುವ ಖಾತೆ ಕಾನೂನುಬಾಹಿರವಾಗಿರುವ ಹಿನ್ನೆಲೆಯಲ್ಲಿ ಅದನ್ನು ರದ್ದುಗೊಳಿಸುವಂತೆ ಸೂಚಿಸಲಾಗಿದೆ. ಇಂತಹ ವಿವಾದಿತ ಆಸ್ತಿಗೆ ಕಟ್ಟಡ ಪರವಾನಗಿ ನೀಡುವುದು ನಿಯಮ ಬಾಹಿರವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

# ಕ್ರೀಡೆಯಿಂದ ಮಾನಸಿಕ ಸದೃಢತೆ ಬೆಳೆಸಿಕೊಳ್ಳಲು ಸಾಧ್ಯ

## ಮೇಜರ್ ಧ್ಯಾನ್‌ಚಂದ್ ಜನ್ಮ ದಿನಾಚರಣೆ ಸ್ಮರಣಾರ್ಥ ವಿಶ್ವ ಕ್ರೀಡಾ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಮಕ್ಕಳು ಶಾಲಾ ಹಂತದಲ್ಲಿ ಕ್ರೀಡೆಯಲ್ಲಿ ಹೆಚ್ಚು ಭಾಗವಹಿಸುವುದರಿಂದ ಜೀವನದಲ್ಲಿ ಗೆಲುವು ಹಾಗೂ ಸೋಲುಗಳನ್ನು ಸಮಾನವಾಗಿ ಕಾಣುವ ಮಾನಸಿಕ ಸದೃಢತೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ಮುಖ್ಯಸ್ಥ ಬಿ.ಕೆ.ಗಂಗಾಧರ್ ತಿಳಿಸಿದರು.

ನಗರದ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತರಾಷ್ಟ್ರೀಯ ಶಾಲೆ ಆವರಣದಲ್ಲಿ ಮೇಜರ್ ದ್ಯಾನ್ ಚಂದ್ ಅವರ ಜನ್ಮ ದಿನಾಚರಣೆ ಸ್ಮರಣಾರ್ಥ ವಿಶ್ವ ಕ್ರೀಡಾ ದಿನಾಚರಣೆ ಉದ್ಘಾಟಿಸಿ ಮಾತ ನಾಡಿದ ಅವರು, ಧ್ಯಾನ್ ಚಂದ್ ಅವರು ಒಲಂಪಿಕ್‌ನಲ್ಲಿ ನಮ್ಮ ದೇಶಕ್ಕೆ ಮೂರು ಬಾರಿ ಚಿನ್ನದ ಪದಕವನ್ನು ತಂದುಕೊಟ್ಟ ಒಬ್ಬ ಶ್ರೇಷ್ಠ ಆಟಗಾರ. ಹಾಕಿ ಆಟದ ಮೇಲೆ ಅವರ ಹಿಡಿತ ಹೇಗಿತ್ತು ಎಂಬುವುದಕ್ಕೆ ಅವರ ಆಟವನ್ನು




ವೀಕ್ಷಿಸಿದವರಿಗೆ ಅದರ ಬಗ್ಗೆ ಅರಿವಾಗುತ್ತದೆ ಎಂದರು.

ಹಾಕಿ ಸ್ಟಿಕ್‌ನೊಂದಿಗೆ ಚೆಂಡು ಅಂಟಿಕೊಂಡಿರುತ್ತಿತ್ತೇನೊ ಎಂಬುವಷ್ಟು ಅವರ ಆಟ ಸೊಗಸಾಗಿರುತ್ತಿತ್ತು. ಯಾವುದೇ ಒಬ್ಬ ಆಟಗಾರನಿಗೆ ತಾನು ಪ್ರತಿನಿಧಿಸುವ ಕ್ರೀಡೆಯ ಮೇಲೆ ಆಷ್ಟೊಂದು ಆಸಕ್ತಿ, ಶ್ರದ್ಧೆ, ಭಕ್ತಿಯೊಂದಿಗೆ ಹಾಕಿ ಕ್ರೀಡೆಯನ್ನು ಕಲಿತಿದ್ದರು. ಧ್ಯಾನ್‌ಚಂದ್ ಅವರು ಕ್ರೀಡಾ ಪ್ರೇಮ ಇಂದಿನ ಪ್ರತಿಯೊಬ್ಬ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯಾದರೆ ಸಾಧನೆ ಹಾದಿ ಸುಲಲಿತವಾಗಲಿದೆ. ಅವರ ಹೆಸರಿನಲ್ಲಿ ವಿಶ್ವ ಕ್ರೀಡಾ ದಿನಾಚರಣೆ ಮಾಡುತ್ತಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ ಎಂದು ಶ್ಲಾಘಿಸಿದರು.

ಹಿಂದಿನ ಕಾಲದಲ್ಲಿ ಪ್ರತಿ ಗ್ರಾಮ, ಪಟ್ಟಣದಲ್ಲೂ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿ ಮುಂದೆ ಬರುತ್ತಿದ್ದರು, ಆದರೆ, ಸೌಲಭ್ಯ ಗಳಿಲ್ಲದೆ ನಿರಾಶಿತರಾಗುತ್ತಿದ್ದರು. ಆದರೇ ಇಂದು ಆಡಲು ಮೈದಾನದಿಂದ ಪೋಷಕರು ತಮ್ಮ ಮಕ್ಕಳಿಗೆ ಎಲ್ಲಾ ಸೌಲಭ್ಯ ನೀಡಿದರೂ ಕ್ರೀಡೆಯಲ್ಲಿ ಆಸಕ್ತಿ ಇಲ್ಲ. ಹಾಗಾಗಿಯೇ ಇಂದು ಯುವ ಸಮುದಾಯ ಚಿಕ್ಕ ವಯಸ್ಸಿಗೆ ಅನಾರೋಗ್ಯದಿಂದ ಬಳಲುವಂತಾಗಿದೆ. ಸೋಲುಗಳನ್ನು ಒಪ್ಪಿಕೊಂಡು ಸದೃಢವಾಗಿ ಬೆಳೆಯುವ ಮನಸ್ಥಿತಿ ಇಲ್ಲದಂತಾಗಿದೆ. ಚಿಕ್ಕ ವಯಸ್ಸಿನಿಂದ ಕ್ರೀಡೆಯಲ್ಲಿ ಭಾಗವಹಿ ಸಿದರೆ ಮಾನಸಿಕವಾಗಿ ಸದೃಢವಾಗಿ ಬೆಳೆಯಬಹುದು. ಜೀವನದಲ್ಲಿ ಸೋಲು ಅನುಭವಿಸಿದಾಗ ಅದನ್ನು ಗಟ್ಟಿಯಾಗಿ ಎದುರಿಸಿ ಬದುಕು ಕಟ್ಟಿಕೊಳ್ಳಬಹುದಾಗಿದೆ. ಪೋಷಕರು ಮಕ್ಕಳಿಗೆ ಶಿಕ್ಷಣಕ್ಕೆ ನೀಡುವ ಆದ್ಯತೆಯನ್ನು ಕ್ರೀಡೆಗೆ ನೀಡಿ ಅವರನ್ನು ಸದೃಢ ವ್ಯಕ್ತಿಗಳನ್ನಾಗಿ ರೂಪಿಸಲು ಮುಂದಾಗಬೇಕು ಎಂದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಅಧ್ಯಕ್ಷ ಎಚ್.ಕೆ.ದಿಲೀಪ್ ಕುಮಾರ್, ಟೈಮ್ಸ್ ಶಾಲೆ ಮುಖ್ಯ ಶಿಕ್ಷಕಿ ರಕ್ಷತ ಜೈನ್, ಆಡಳಿತಾಧಿಕಾರಿ ಅರ್ಜುನ್, ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ಸಂಯೋಜಕ ರಮೇಶ್, ದೈಹಿಕ ಶಿಕ್ಷಕ ದರ್ಶನ್, ಕ್ರಿಕೆಟ್ ತರಬೇತುದಾರ ವಿನಯ್, ಫುಟ್ ಬಾಲ್ ತರಬೇತುದಾರ ತೇಜು ಇದ್ದರು.

# ಸೆ.5ರಂದು ಪ್ರಜಾ ಸೇವೆ ಆಂದೋಲನ ಸಭೆ



• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಸೆ.5 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ತಾಲ್ಲೂಕು ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ಕಾರ್ಯಕ್ರವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಕುಂದು–ಕೊರತೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸೆ.5 ರ ಬೆಳಿಗ್ಗೆ 10.30 ಗಂಟೆಗೆವರೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿದ್ದು, ಸಭೆ ನಡೆಯುವ ಸಂದರ್ಭದಲ್ಲಿ ಹಾಸನ ತಾಲ್ಲೂಕಿನ ಸಾರ್ವಜನಿಕರು ಖುದ್ದು ಹಾಜರಾಗಿಯು ಸಹ ತಮ್ಮ ಅಹವಾಲನ್ನು ಸಲ್ಲಿಸುವ ಮೂಲಕ ಸಭೆಯ ಸದುಪಯೋಗ ಪಡೆದುಕೊಳ್ಳುವಂತೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿ.ಜಿ.ಎಸ್ ಪಿ.ಯು ಕಾಲೇಜಿನಲ್ಲಿ 77ನೇ ಜಿನೀವಾ ಒಪ್ಪಂದ ದಿನಾಚರಣೆ

# ಯುದ್ಧದಲ್ಲಿ ಸೈನಿಕರ ರಕ್ಷಣೆಗೆ ರೂಪಿಸಲಾದ ಸರಣಿ

• ಪ್ರಜೋದಯ ವರದಿ

**ಹಾಸನ:** ಜಿನೀವಾ ಒಪ್ಪಂದವು ಯುದ್ಧದ ಸಂದರ್ಭದಲ್ಲಿ ಮಾನವೀಯತೆಯನ್ನು ಕಾಪಾಡಲು ಹಾಗೂ ಸೈನಿಕರು ಮತ್ತು ನಾಗರಿಕರ ರಕ್ಷಣೆಗೆ ರೂಪಿಸಲಾದ ಅಂತರರಾಷ್ಟ್ರೀಯ 4 ಒಪ್ಪಂದಗಳ ಸರಣಿಯಾಗಿದೆ. 1949ರ ಆಗಸ್ಟ್ 12ರಂದು ಜಿನೀವಾ ಒಪ್ಪಂದಗಳ ಪ್ರಮುಖ ಒಪ್ಪಂದಗಳು ಅಂಗೀಕರಿಸಲ್ಪಟ್ಟವು ಎಂದು ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್ ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನ ಹಾಗೂ ಬಿಜಿಎಸ್ ಪದವಿ ಪೂರ್ವ ಕಾಲೇಜು, ನಗರದ ಕಿರಿಯ ರೆಡ್ ಕ್ರಾಸ್ ಘಟಕದ ಸಂಯುಕ್ತಾಶ್ರಯದಲ್ಲಿ ವಿಶ್ವ ಜಿನೀವಾ ಒಪ್ಪಂದ ದಿನಾಚರಣೆ ಅಂಗವಾಗಿ ವಿಶೇಷ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯುದ್ಧಭೂಮಿಯಲ್ಲಿ ಗಾಯಗೊಂಡ ಅಥವಾ ಅಶಕ್ತಗೊಂಡ ಸೈನಿಕರಿಗೆ ಸುರಕ್ಷಿತವಾಗಿ ಚಿಕಿತ್ಸೆ ನೀಡಬೇಕು. ಶತ್ರು ರಾಷ್ಟ್ರದ ವಶಕ್ಕೆ ಸಿಲುಕಿದ ಸೈನಿಕರ ಮೇಲೆ ದರ್ಜನ್ಯ ನಡೆಸಬಾರದು. ಅವರಿಗೆ ಗೌರವಯುತವಾದ ಆಹಾರ, ಬಟ್ಟೆ ಹಾಗೂ



ವೈದ್ಯಕೀಯ ನೆರವು ಒದಗಿಸಬೇಕು. ಯುದ್ಧ ನಡೆಯುವ ಪ್ರದೇಶಗಳಲ್ಲಿ ಸಿಲುಕಿಕೊಳ್ಳುವ ಸಾಮಾನ್ಯ ನಾಗರಿಕರ ಪ್ರಾಣ ಮತ್ತು ಆಸ್ತಿಗೆ ಧಕ್ಕೆಯಾಗದಂತೆ ರಕ್ಷಣೆ ನೀಡಬೇಕು. ಗಾಯಗೊಂಡ ಯೋಧರ ಆರೋಗ್ಯ ಮತ್ತು ಸ್ಥಿತಿಗತಿಗಳ ಕುರಿತು ಅಗತ್ಯ ಮಾಹಿತಿಯನ್ನು ಮಾನವೀಯ ನೆಲೆಯಲ್ಲಿ ಸಂಬಂಧಪಟ್ಟವರಿಗೆ ತಿಳಿಸುವ ಮೂಲಕ ಅವರ ಹಕ್ಕುಗಳನ್ನು ರಕ್ಷಿಸಬೇಕು. ರೆಡ್ ಕ್ರಾಸ್‌ನಂತಹ ವೈದ್ಯಕೀಯ ಚಿಹ್ನೆಗಳನ್ನು ಹೊಂದಿರುವ ಸಿಬ್ಬಂದಿ ಹಾಗೂ ಅಂಬುಲೆನ್ಸ್‌ಗಳ ಮೇಲೆ ದಾಳಿ ಮಾಡಬಾರದು ಎಂಬುದು ಜಿನೀವಾ ಒಪ್ಪಂದದ ಪ್ರಮುಖ ಆಶಯಗಳಾಗಿವೆ ಎಂದು ಅವರು ವಿವರಿಸಿದರು.

ವಿದ್ಯಾರ್ಥಿಗಳು ಜಿನೀವಾ ಒಪ್ಪಂದದ ಮಾನವೀಯ ಮೌಲ್ಯಗಳನ್ನು ಅರಿತುಕೊಂಡು, ತಮ್ಮ ದಿನನಿತ್ಯದ ಜೀವನದಲ್ಲಿಯೂ ಸಂಕಷ್ಟದಲ್ಲಿರುವ ಸಾರ್ವಜನಿಕರಿಗೆ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕ ಬಿ.ಆರ್.ಉದಯ್‌ಕುಮಾರ್ ಅವರು ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ವಿವಿಧ ಸ್ವಯಂಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ವಿನಯ, ಶ್ರದ್ಧೆ ಹಾಗೂ ಸಂಯಮವನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿ.ಜಿ.ಎಸ್. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಎಸ್. ಮೋಹನ್ ಅವರು ಮಾತನಾಡಿ, ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸ್ವಯಂಸೇವಕರು ತಮ್ಮ ಜೀವನವನ್ನು ಲೆಕ್ಕಿಸದೆ ಸಾರ್ವಜನಿಕರ ಸೇವೆಗೆ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಸಭಾಪತಿಗಳು ತಿಳಿಸಿದ ಮಾನವೀಯತೆ ಹಾಗೂ ಸೇವೆಯ ಸಂದೇಶವನ್ನು ವಿದ್ಯಾರ್ಥಿಗಳು ಸ್ಮರಿಸಿಕೊಂಡು, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೆಡ್ ಕ್ರಾಸ್ ಸಂಸ್ಥೆಯ ಶಬ್ಬೀರ್ ಅಹ್ಮದ್, ಎಚ್.ಡಿ.ಜಯೇಂದ್ರ ಕುಮಾರ್, ಸುಬ್ಬಸ್ವಾಮಿ, ಗಿರೀಶ್, ಭೀಮರಾಜ್, ಬಿ.ಜಿ.ಎಸ್ ಕಾಲೇಜಿನ ಕಿರಿಯ ರೆಡ್‌ಕ್ರಾಸ್ ಘಟಕದ ಸಂಯೋಜಕ ಡಿ.ಆರ್.ವಿಶ್ವನಾಥ್, ರೆಡ್‌ಕ್ರಾಸ್ ಜಿಲ್ಲಾ ಸಂಯೋಜಕ ಅವಿನಾಶ್, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶಿವರಾಮ್ ವಿರುದ್ಧ ಏಕವಚನದಲ್ಲಿ ವಾಗ್ದಾಳಿ: ಎಚ್ಚರಿಕೆ

• ಪ್ರಜೋದಯ ವರದಿ

**ಸಕಲೇಶಪುರ:** ಮಾಜಿ ಸಚಿವ ಗಂಡಸಿ ಶಿವರಾಮ್ ವಿರುದ್ಧ ಶಾಸಕ ಸುರೇಶ್ ಏಕವಚನದಲ್ಲಿ ಹೇಳಿಕೆ ನೀಡುವುದನ್ನು ಮುಂದುವರಿಸಿದರೆ ದೊಡ್ಡ ಮಟ್ಟದ ಹೋರಾಟ ನಡೆಸಲಾಗುವುದು ಎಂದು ಭಾಗೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಚಾರ್ಲ್ಸ್ ಅವರು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಗಂಡಸಿ ಶಿವರಾಮ್ ಅವರು ನೀರಾವರಿ ಹಾಗೂ ರೈತರ ಪರ ಹೋರಾಟ ನಡೆಸುತ್ತಿದ್ದು, 76 ವರ್ಷ ವಯಸ್ಸಿನಲ್ಲಿಯೂ ಬೆಳಗ್ಗಿನಿಂದ ಸಂಜೆವರೆಗೆ ಬೇಲೂರು ತಾಲೂಕಿನಲ್ಲಿ ಜನರ ಪರ ಕೆಲಸ ಮಾಡುತ್ತಿದ್ದಾರೆ. ಆದರೆ, ಸಂಬಂಧಪಟ್ಟವರು ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ ಎಂದು ಟೀಕಿಸಿದರು.

ಬೇಲೂರು ಶಾಸಕ ಸುರೇಶ್ ಅವರು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದರಿಂದ ರಾಜಕಾರಣಕ್ಕೆ ಗಮನ ನೀಡಲು ಸಮಯವಿಲ್ಲ ಎಂದು ಆರೋಪಿಸಿದ ಅವರು, ಶಿವರಾಮ್ ಅವರು ಚುನಾವಣೆಯಲ್ಲಿ ಸೋತಿದ್ದರೂ ಕ್ಷೇತ್ರದ ಜನರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಬಾಯಿಗೆ ಬಂದಂತೆ ಹೇಳಿಕೆ ನೀಡುವುದನ್ನು ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.



2028ರ ಚುನಾವಣೆಗೆ ಸೋಲಿನ ಭೀತಿ ಎದುರಾಗಿರುವುದರಿಂದ ಸೋಲುತ್ತೇನೆ ಎಂಬ ಆತಂಕದ ಮನೋಭಾವದಿಂದ ಮಾತನಾಡುತ್ತಿದ್ದಾರೆ. ಮತ್ತೊಂದೆಡೆ, ವರ್ಗಾವಣೆ ದಂಧೆ ನಡೆಸುತ್ತಿದ್ದೀಯ ಎಂದು ಆರೋಪಿಸಿದ್ದಾರೆ. ವರ್ಗಾವಣೆ ಎಂಬುದು ಎಲ್ಲ ಸರ್ಕಾರಗಳಲ್ಲೂ ನಡೆಯುವ ಪ್ರಕ್ರಿಯೆ. ಅದೇನು ದಂಧೆಯಲ್ಲ. ಜನಪರ ಕೆಲಸ ಮಾಡಲು ಅಧಿಕಾರಿಗಳನ್ನು ನೇಮಿಸಿಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.

ನೀರಾವರಿ ವಿಚಾರವಾಗಿ ಬಾಗಣ ಬಿಡಿಸಲು ಸಾವಿರಾರು ಜನರನ್ನು ಕರೆದುಕೊಂಡು ಹೋಗಿ ಬಾಗಣ ಬಿಡಿಸಿದ್ದಾರೆ. ಅವರು ನಾಲ್ಕು ಬಾರಿ ಶಾಸಕರಾಗಿ, ನಾಲ್ಕು ಬಾರಿ ಸೋತಿದ್ದಾರೆ. ಅಧಿಕಾರ ಕಳೆದುಕೊಂಡು 20 ವರ್ಷಗಳಾದರೂ ಇಂದು ಜನರೊಂದಿಗೆ ಒಡನಾಟ ಹೊಂದಿಕೊಂಡು ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳು ಕೂಡ ಅವರೊಂದಿಗಿನ ಒಡನಾಟದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ನಾಲ್ಕು ಬಾರಿ ಶಾಸಕರಾಗಿದ್ದವರು ಏನು ಮಾಡಿದ್ದಾರೆ ಎಂದು ಪ್ರಶ್ನಿಸುವ ಮೊದಲು ಅವರ ಅವಧಿಯಲ್ಲಿ ನಡೆದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಬೇಕು. ಅವರ ಅವಧಿಯಲ್ಲಿ ಸಾವಿರಾರು ಬಡವರಿಗೆ ಮನೆ ಹಾಗೂ ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಮತ್ತೊಂದೆಡೆ, ಪ್ರಸ್ತುತ ಕ್ಷೇತ್ರದಲ್ಲಿ ಮೂರೂವರೆ ವರ್ಷಗಳಿಂದ ಶಾಸಕರಾಗಿದ್ದರೂ ಹರಳಿಯಿಂದ ಬೇಲೂರುವರೆಗೆ ರಸ್ತೆ ಗುಂಡಿಗಳನ್ನು ಮುಚ್ಚಲು ಸಾಧ್ಯವಾಗಿಲ್ಲ ಎಂದು ದೂರಿದರು.

ಗಂಡಸಿ ಶಿವರಾಮ್ ಅವರ ಬಗ್ಗೆ ಮಾತನಾಡಲು ಸುರೇಶ್ ಅವರಿಗೆ ಯಾವುದೇ ನೈತಿಕತೆ ಇಲ್ಲ. ಶಿವರಾಮ್ ಅವರು ತುಂಬಾ ಪ್ರಾಮಾಣಿಕ ರಾಜಕಾರಣಿ. ಹಾಗಾಗಿಯೇ ಅವರು ಮಾಜಿ ಸಚಿವರಾಗಿದ್ದಾರೆ. ಸುಮಾರು 45 ವರ್ಷಗಳಿಂದ ಅವರ ಮೇಲೆ ಒಂದೇ ಒಂದು ಕಳಂಕವೂ ಇಲ್ಲ. ಆದರೆ, ಸುರೇಶ್ ಅವರು ಈ ಹಿಂದೆ ಕಾಮಗಾರಿಗಳ ವಿಚಾರದಲ್ಲಿ ಎಚ್ ಎಚ್.ಡಿ. ಕುಮಾರಸ್ವಾಮಿ ಅವರ ಹಿಂದೆ ಕೆಲಸಕ್ಕಾಗಿ ತಿರುಗುತ್ತಿದ್ದರು ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಆದಿಲ್ ಅಲಿ ಉಪಸ್ಥಿತರಿದ್ದರು.

# ನೆರೆಯ ನೇಪಾಳಕ್ಕೆ ಭಾರತ ಸಂಪೂರ್ಣ ಬೆಂಬಲ

## ಕಲ್ಪನೆಗೂ ನಿಲುಕದ ದುರಂತ ಎಂದ ನೇಪಾಳ ಪ್ರಧಾನಿ | ಮೃತರ ಸಂಖ್ಯೆ 900ಕ್ಕೆ ಏರಿಕೆ

• ಪ್ರಜೋದಯ ವರದಿ

**ನವದೆಹಲಿ:** ದಿಢೀರ್ ಪ್ರವಾಹದಿಂದಾಗಿ ತೀವ್ರ ಹಾನಿಗೊಳಗಾಗಿರುವ ನೆರೆಯ ನೇಪಾಳಕ್ಕೆ ಭಾರತವು ಸಂಪೂರ್ಣ ಬೆಂಬಲ ನೀಡಲಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಭರವಸೆ ನೀಡಿದ್ದಾರೆ.

ಭಾರತ ಮತ್ತು ನೇಪಾಳ ಸುಖ-ದುಃಖದ ಸಾಥಿ (ಕಷ್ಟ-ಸುಖದ ಜೊತೆಗಾರರು) ಎಂದು ಬಣ್ಣಿಸಿರುವ ಅವರು, ನಾಪತ್ತೆಯಾದವರ ಶೋಧ ಕಾರ್ಯ, ರಕ್ಷಣೆ ಮತ್ತು ಪುನರ್ವಸತಿ ಕಾರ್ಯಾಚರಣೆಗೆ ಭಾರತ ಬದ್ಧವಾಗಿದೆ ಎಂದಿದ್ದಾರೆ. ದೆಹಲಿಯಲ್ಲಿರುವ ನೇಪಾಳ ರಾಯಭಾರ ಕಚೇರಿಗೆ ಸೋಮವಾರ ಭೇಟಿ ನೀಡಿದ ರಾಜನಾಥ ಸಿಂಗ್, ಸಂತಾಪ ಸೂಚಕ ಪುಸ್ತಕ ಸಹಿ ಮಾಡಿ ಸಂತಾಪವನ್ನು ವ್ಯಕ್ತಪಡಿಸಿದರು.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಆಗಸ್ಟ್ 26ರಂದು ಸಂಭವಿಸಿದ ಭೀಕರ ಪ್ರವಾಹ ದಿಂದ ಮೃತಪಟ್ಟ ಕುಟುಂಬಗಳಿಗೆ ಭಾರತ ಸರ್ಕಾರ ಮತ್ತು ದೇಶದ ಪರವಾಗಿ ಸಂತಾಪ ಸೂಚಿಸುತ್ತೇನೆಂದು ಬರೆದುಕೊಂಡಿದ್ದಾರೆ. ಈ ದುರಂತವು ನೇಪಾಳಿ ಪ್ರಜೆಗಳ ಜೊತೆಗೆ ಭಾರ ತೀಯರು ಸೇರಿ ಅನೇಕ ವಿದೇಶಿ ಪ್ರಜೆಗಳ ಮೇಲೂ ಪರಿಣಾಮ ಬೀರಿದೆ. ಮೃತರ ಕುಟು ಂಬಗಳಿಗೆ ನಮ್ಮ ಪ್ರಾರ್ಥನೆಗಳು ಸಲ್ಲುತ್ತವೆ. ಸುಖ-ದುಃಖದಲ್ಲಿ ಜೊತೆಯಾಗಿ ಭಾರತವು ಯಾವಾಗಲೂ ನೇಪಾಳದ ಜೊತೆ ನಿಂತಿದೆ. ಈ ಕಷ್ಟದ ಸಮಯ ದಲ್ಲಿಯೂ ನಾವು ನಮ್ಮ ನೇಪಾಳಿ ಸಹೋದರ- ಸಹೋದರಿಯರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಲಿದ್ದು, ರಕ್ಷಣೆ ಹಾಗು ಪುನರ್ವಸತಿ ಕಾರ್ಯಗಳಿಗೆ ಸಂಪೂರ್ಣ ಸಹಕಾರ ನೀಡಲಿ ದ್ದೇವೆಂದು ಸಿಂಗ್ ಪುನರುಚ್ಚರಿಸಿದ್ದಾರೆ.



**ನೇಪಾಳದ ಸ್ಥಿತಿ ಭೀಕರ**

ಆ. 26ರಂದು ನೇಪಾಳ-ಟಿಬೆಟ್ ಗಡಿ ಭಾಗದಲ್ಲಿ ಸಂಭವಿಸಿದ ಪ್ರವಾಹದಿಂದಾಗಿ ನೇಪಾಳದ ಹಲವಾರು ನಗರಗಳು ಹಾಗೂ ಹಳ್ಳಿಗಳು ಸಂಪೂರ್ಣವಾಗಿ ಕೊಚ್ಚಿಹೋಗಿವೆ. ದುರಂತ ಸಂಭವಿಸಿದ ತಕ್ಷಣದಿಂದಲೇ ಭಾರತ ಸರ್ಕಾರವು ನೇಪಾಳಕ್ಕೆ ನೆರವಿನ ಹಸ್ತ ಚಾಚಿದೆ. ಈಗಾಗಲೇ ಹಲವು ಹಂತಗಳಲ್ಲಿ ಪರಿಹಾರ ಸಾಮಗ್ರಿಗಳನ್ನು ಕಳುಹಿಸಿಕೊಡಲಾಗಿದ್ದು, ಸಂತ್ರಸ್ತರ ಡಿಎನ್‌ಎ ಮಾದರಿ ವಿಶ್ಲೇಷಣೆ ಮತ್ತು ಮೃತರ ಗುರುತು ಪತ್ತೆಗೆ ಸಹಾಯ ಮಾಡಲು 19 ಸದಸ್ಯರ ವಿಶೇಷ ವಿಧಿವಿಜ್ಞಾನ ತಂಡವನ್ನು ನೇಪಾಳಕ್ಕೆ ಕಳುಹಿಸಲಾಗಿದೆ.

**ಕಲ್ಪನೆಗೂ ನಿಲುಕದ ದುರಂತ**

900ಕ್ಕೂ ಅಧಿಕ ಮಂದಿ ಸಾವಿಗೆ ಕಾರಣವಾದ ನೇಪಾಳದ ಭೀಕರ ಪ್ರವಾಹದ ಕುರಿತು ನೇಪಾಳ ಪ್ರಧಾನಿ ಬಾಲೇಂದ್ರ ಶಾ ಆತಂಕ ವ್ಯಕ್ತಪಡಿಸಿದ್ದು, ಕಲ್ಪನೆಗೂ ನಿಲುಕದ ದುರಂತ ಎಂದಿದ್ದಾರೆ.

ನೇಪಾಳ-ಚೀನಾ ಗಡಿಯ ರಾಸುವಾ ಪ್ರದೇಶದಲ್ಲಿ ಭೋಟೆಕೋಶಿ ನದಿಯ ಭೀಕರ ಪ್ರವಾಹದಿಂದ ಜೀವಹಾನಿ, ಆಸ್ತಿ ಮತ್ತು ಮೂಲ ಸೌಕರ್ಯಗಳಿಗೆ ಉಂಟಾಗಿರುವ ನಷ್ಟದ ಸಂಪೂರ್ಣ ಅಂದಾಜು ಮಾಡಲು ಅಧಿಕಾರಿ ಗಳಿಗೆ ಅತ್ಯಂತ ಕಷ್ಟವಾಗುತ್ತಿದೆ ಎಂದು ತಿಳಿಸಿದ್ದಾರೆ.

ಪ್ರತಿಕೂಲ ಹವಾಮಾನ, ಕಠಿಣ ಭೌಗೋಳಿಕ ಪರಿಸ್ಥಿತಿ ಹಾಗೂ ಮುಂದುವರಿದಿರುವ ಅಪಾಯಗಳಿಂದ ಈ ಕಾರ್ಯ ಸವಾಲಿನದ್ದಾಗಿದೆ. ಆದರೂ ನಾಗರಿಕರ ಜೀವ ರಕ್ಷಿಸಲು ನಾವು ದೃಢ ಸಂಕಲ್ಪದೊಂದಿಗೆ ಮುಂದುವರಿ ಯುತ್ತಿದ್ದೇವೆ. ನಮ್ಮ ಒಗ್ಗಟ್ಟು ಮತ್ತು ಸಾಮೂಹಿಕ ಪ್ರಯತ್ನಗಳ ಮೂಲಕ ಈ ಬಿಕ್ಕಟ್ಟನ್ನು ನಾವು ಖಂಡಿತವಾಗಿ ಜಯಿಸುತ್ತೇವೆಂದು ನೇಪಾಳ ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಕ್ಷಣಾ ಮತ್ತು ಪರಿಹಾರ ಕಾರ್ಯಾ ಚರಣೆಗಳು ಕಠಿಣ ಪರಿಸ್ಥಿತಿಯಲ್ಲಿಯೇ ಮುಂದುವರಿದಿವೆ. ಹಲವು ಪ್ರದೇಶಗಳಲ್ಲಿ ಹವಾಮಾನ ವೈಪರೀತ್ಯ ಮತ್ತು ದುರ್ಗಮ ಭೂಪ್ರದೇಶದಿಂದ ರಕ್ಷಣಾ ತಂಡಗಳಿಗೆ ಸವಾಲು ಎದುರಾಗಿದೆ. ಈ ನಡುವೆ ಹಿಮನದಿ ಕುಸಿತಕ್ಕೂ ಬಳಿಕ ಸಂಭವಿಸಿದ ಹಠಾತ್ ಪ್ರವಾಹದ ಡ್ರೋನ್ ದೃಶ್ಯವು ದುರಂತದ ತೀವ್ರತೆಯನ್ನು ಮತ್ತಷ್ಟು ಸ್ಪಷ್ಟ ಪಡಿಸಿದೆ. ಪರ್ವತದಿಂದ ಹಿಮ, ಬಂಡೆ ಮತ್ತು ಕೆಸರಿನ ರಾಶಿ ಕಣಿವೆಯತ್ತ ಅಪ್ಪಳಿಸಿದ ಕ್ಷಣವು ಪ್ರಕೃತಿಯ ಭೀಕರ ಶಕ್ತಿಗೆ ಸಾಕ್ಷಿಯಾಗಿದೆ. ದುರಂತದಲ್ಲಿ ಈವರೆಗೂ ಸಿಕ್ಕಿರುವ ಗುರುತು ಪತ್ತೆ ಯಾಗದ ಶವಗಳ ಕುರಿತು ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಹೇಳಿದ ಬಾಲೇಂದ್ರ ಶಾ, ನೇಪಾಲಂನಲ್ಲಿ ಶವವನ್ನು ಹೂಳುವ ಮೊದಲು ಡಿಎನ್‌ಎ ಮಾದರಿಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದರು.

**ದೀರ್ಘಕಾಲ ಶವ ಇಟ್ಟುಕೊಳ್ಳಲು ಸಾಧ್ಯವಿಲ್ಲ**

ಅನೇಕ ದೇಹಗಳನ್ನು ಗುರುತಿಸಲು ಅಸಾಧ್ಯವಾದ ರೀತಿಯಲ್ಲಿ ಕೊಳೆಯುತ್ತವೆ. ನೀವು ದೀರ್ಘ ಕಾಲ ನಿಮ್ಮ ದೇಹದ ಇರಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಕಾನೂನು ಪ್ರಕ್ರಿಯೆಯ ನಂತರ, ಅವರು ದಮನ ಮಾಡಬಹುದು. ಡಿಮೋಟಿವ್ ಮಾಡಿದ ದೇಹಗಳನ್ನು ಸಮಾಧಿ ಮಾಡುವ ಮೊದಲು, ಸರ್ಕಾರವು ಮಾರ್ಗ ಸೂಚಿಗಳನ್ನು ಅನುಸರಿಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಗುರುತಿಸಲಾಗದ ದೇಹಗಳು ಮತ್ತು ಇತರ ಮಾಹಿತಿಯ ಡಿಎನ್‌ಎ ಮಾದರಿಗಳನ್ನು ನಿಗ್ರಹಿಸುವ ಮೊದಲು ಸಂಗ್ರಹಿಸಿದ ಮಾದರಿಗಳನ್ನು ಸಂರಕ್ಷಿಸಲಾಗುತ್ತದೆ. ಕಾಣೆಯಾ ದವರ ಸಂಬಂಧಿಕರು, ಅವರ ವಿಶ್ವಾಸದ್ರೋಹಿ ಜನರು, ಜೀವಂತವಾಗಿದ್ದಾರೆಯೇ ಎಂದು ಖಚಿತಪಡಿಸಲು ಇದು ಸಹಾಯ ಮಾಡುತ್ತದೆ ಎಂದು ಶಾ ಹೇಳಿದ್ದಾರೆ.

## ಜಾತ್ರಾ ಮಹೋತ್ಸವದ ವಿಚಾರಕ್ಕೆ ಮಾರಾಮಾರಿ

» ಮೊದಲನೇ ಪುಟದಿಂದ

ಭೋವಿ ಸಮಾಜದವರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಸೈದರಹಳ್ಳಿ ಗ್ರಾಮದಲ್ಲಿ ನಡೆದ ಘಟನೆಯಿಂದ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಘಟನೆಯ ಬಳಿಕ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ವಿರುದ್ಧವೂ ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಷಯ ತಿಳಿದು ಬಾಣಾವರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮದಲ್ಲಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಇದುವರೆಗೆ ಯಾಬ ದೂರು ದಾಖಲಾಗಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ.

## ಗ್ರಾ.ಪಂ. ಮೀಸಲಾತಿ ಸರಿಪಡಿಸಲು ಶಾಸಕ ಬಾಲಕೃಷ್ಣ ಆಗ್ರಹ

» ಮೊದಲನೇ ಪುಟದಿಂದ

ಶೀಘ್ರವೇ ಪ್ರೋತ್ಸಾಹಧನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಬರ ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಎಕರೆಗೆ 15 ರಿಂದ 20 ಸಾವಿರ ರೂ. ಪರಿಹಾರ ನೀಡಬೇಕು. ಸಂಕಷ್ಟದಲ್ಲಿರುವ ತೆಂಗು ಬೆಳೆಗಾರರಿಗೂ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ ಅವರು, ತಾಲ್ಲೂಕಿನಲ್ಲಿ 4 ಸಾವಿರ ಬಿಪಿಎಲ್ ಕಾರ್ಡ್ ಕಡಿತಗೊಂಡಿವೆ. ಸಾಮಾಜಿಕ ಭದ್ರತೆಯಡಿ 18069 ಮಂದಿಗೆ ಮಾಸಾಶನ ತಡೆಹಿಡಿಯಲಾಗಿದೆ. ಈ ಕುರಿತು ತಹಶೀಲ್ದಾರ್ ಗಮನಕ್ಕೆ ತರಲಾಗಿದ್ದು, ಶೀಘ್ರ ಆಗಿರುವ ಲೋಪ ಸರಿಪಡಿಸಬೇಕೆಂದರು.

ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ದೇವರಾಜೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್.ಆರ್. ವೆಂಕಟೇಶ್‌ಮೂರ್ತಿ, ನಿರ್ದೇಶಕ ಎಂ.ಆರ್.ಅನಿಲ್ ಕುಮಾರ್, ಎನ್.ಬಸವರಾಜು, ರವೀಶ್ ಇದ್ದರು.

## ಪಕ್ಷ ಸಂಘಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಫಲ




• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಈ.ಲಕ್ಷ್ಮಣ್ ಅವರು ಪಕ್ಷ ಸಂಘಟನೆ ದೃಷ್ಟಿಯಿಂದ ಯಾವ ಕೆಲಸವನ್ನೂ ಮಾಡುತ್ತಿಲ್ಲ, ಅವರನ್ನು ಏಕೆ ಆ ಸ್ಥಾನದಲ್ಲಿ ಕೂರಿಸಿದ್ದಾರೋ ಗೊತ್ತಿಲ್ಲವೆಂದು ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗ ಪ್ರಧಾನ ಕಾರ್ಯದರ್ಶಿ ಸಿ.ಆರ್.ಅಬ್ದುಲ್ ಹಾದಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಲಕ್ಷ್ಮಣ್ ಅಧ್ಯಕ್ಷತೆಯಲ್ಲಿ ಲೋಕಸಭೆ ಕ್ಷೇತ್ರ ಗೆದ್ದಿದ್ದೇವೆ. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸ್ವಸಾಮರ್ಥ್ಯದಿಂದ ಗೆಲುವು ಸಾಧಿಸಿದ್ದಾರೆ ಹೊರತು ಜಿಲ್ಲಾಧ್ಯಕ್ಷರ ಪಾತ್ರ ಏನೂ ಇಲ್ಲ. ಅವರು ಜಿಲ್ಲಾದ್ಯಂತ ಸಂಘಟನೆ ಮಾಡಿದ್ದರೆ ನಾಲ್ಕು ವಿಧಾನಸಭಾ ಕ್ಷೇತ್ರ ಗೆಲ್ಲಬಹುದಿತ್ತು. ಅವರ ಮಾತನ್ನು ಪಕ್ಷದ ಯಾರೂ ಕೇಳುವುದಿಲ್ಲ. ಸಣ್ಣ ಸಮುದಾಯದ ವ್ಯಕ್ತಿಗೆ ಅಧ್ಯಕ್ಷ ಸ್ಥಾನ ನೀಡಿದರೆ ಸಂಘಟನೆಗೆ ನೆರವಾಗುತ್ತದೆಂದು ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಲಕ್ಷ್ಮಣ್ ಅವರಿಗೆ ಆದ್ಯತೆ ನೀಡಿದರು. ಆದರೆ ಅವರು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಲ್ಲವೆಂದು ಹರಿಹಾಯ್ದರು.

ಈ ಬಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಮುಸ್ಲಿಂ ಅಥವಾ ದಲಿತ ಸಮುದಾಯಕ್ಕೆ ನೀಡಬೇಕು. ಈ ವರೆಗೆ ಲಿಂಗಾಯತ, ಒಕ್ಕಲಿಗ, ಕುರುಬ ಸೇರಿ ಎಲ್ಲಾ ಸಮುದಾಯದವರಿಗೆ ನೀಡಲಾಗಿದೆ. ಜಿಲ್ಲೆಯಲ್ಲಿ 5 ಲಕ್ಷ ದಲಿತರು, 2 ಲಕ್ಷ ಮುಸ್ಲಿಮರಿದ್ದಾರೆ. ದಶಕಗಳಿಂದಲೂ ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿ ನಿಂತಿದ್ದಾರೆ. ಆದರೂ ಈ ವರೆಗೆ ಎರಡೂ ಸಮುದಾಯಗಳನ್ನು ಪರಿಗಣಿಸಿಲ್ಲ ಎಂದರು.

ಜಿಲ್ಲಾಧ್ಯಕ್ಷರ ನೇಮಕಕ್ಕೂ ಮುನ್ನ ಪಕ್ಷದ ವರಿಷ್ಟರು ವೀಕ್ಷಕರನ್ನು ಜಿಲ್ಲೆಗೆ ಕಳಿಸಿದ್ದರು. ಅವರು ಅಭಿಪ್ರಾಯ ಸಂಗ್ರಹಿಸಿದ್ದಾರೆ. ಒಟ್ಟು 30 ಜನರು ಜಿಲ್ಲಾಧ್ಯಕ್ಷ ಹುದ್ದೆಗೆ ಅರ್ಜಿ ಸಲ್ಲಿಸಿದ್ದಾರೆ. ನಾನೂ ಆಕಾಂಕ್ಷಿಯಾಗಿದ್ದು ಹೈಕಮಾಂಡ್ ಪರಿಗಣಿಸಬೇಕೆಂದು ಒತ್ತಾಯಿಸಿದರು.

ನನಗೆ ಅಥವಾ ದಲಿತ ಸಮುದಾಯದ ಮತ್ತೊಬ್ಬರಿಗೆ ಅವಕಾಶ ನೀಡಿದರೂ ಅಭ್ಯಂತರವಿಲ್ಲ. ಸಚಿವ ಕೆ.ಎಂ. ಶಿವಲಿಂಗೇಗೌಡರು, ಹುಡಾ ಅಧ್ಯಕ್ಷರು ಅರಸೀಕೆರೆಯವರಾಗಿದ್ದು, ಜಿಲ್ಲಾಧ್ಯಕ್ಷ ಸ್ಥಾನವನ್ನು ಬೇರೆ ತಾಲ್ಲೂಕು ಮುಖಂಡರಿಗೆ ನೀಡಬೇಕೆಂದು ಒತ್ತಾಯಿಸಿದರು. ಮುಖಂಡರಾದ ಗೌಸ್ ಅಹ್ಮದ್, ಆಸಿಫ್ ಷಾ ಇದ್ದರು.

## ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಿ



• ಪ್ರಜೋದಯ ವರದಿ

**ಹಾಸನ:** ಕ್ರೀಡಾಪಟುಗಳು ಸೋಲಿನಿಂದ ಕುಗ್ಗದೆ, ಗೆಲುವಿನಿಂದ ಹಿಗ್ಗದೆ ಎರಡನ್ನೂ ಸಮನಾಗಿ ಸ್ವೀಕರಿಸಿ ಆತ್ಮವಿಶ್ವಾಸದಿಂದ ಮುನ್ನಡೆಯಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗು ಆಕ್ಸ್‌ಫರ್ಡ್ ಆಂಗ್ಲಮಾಧ್ಯಮ ಶಾಲೆ ವತಿಯಿಂದ ಆಯೋಜಿಸಿರುವ ಹಾಸನ ತಾಲ್ಲೂಕು ನಗರ-ಎ ವಿಭಾಗದ ಪ್ರೌಢಶಾಲೆಗಳ 17ರ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡೆ ವಿದ್ಯಾರ್ಥಿ ಗಳಲ್ಲಿ ಶಿಸ್ತು, ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗು ತಂಡವಾಗಿ ಕಾರ್ಯನಿರ್ವಹಿಸುವ ಮನೋಭಾವ ಬೆಳೆಸುತ್ತದೆ. ಕ್ರೀಡೆಯಲ್ಲಿ ಭಾಗವಹಿಸುವುದೇ ಪ್ರಮುಖವಾಗಿದ್ದು, ಗೆಲುವು-ಸೋಲಿಗಿಂತ ಕ್ರೀಡಾ ಮನೋಭಾವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಸೋಲಿಗೆ ಎದೆಗುಂದದೆ, ಗೆಲುವಿಗೆ ಅತಿಯಾಗಿ ಸಂಭ್ರಮಿಸದೆ ಪ್ರತಿಯೊಂದು ಅನುಭವದಿಂದ ಪಾಠ ಕಲಿತು ಮುಂದುವರಿಯಬೇಕು. ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಶಾಲೆ, ತಾಲ್ಲೂಕು ಹಾಗು ಜಿಲ್ಲೆಗೆ ಕೀರ್ತಿ ತರಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಶಿಕ್ಷಕರು ಹಾಜರಿದ್ದರು.

## ಪುಟ್ಟಸ್ವಾಮಿ ನಿಧನ

• ಪ್ರಜೋದಯ ವರದಿ



**ಹಾಸನ:** ಕಟ್ಟಾಯ ಹೋಬಳಿ ಶೆಟ್ಟಿಹಳ್ಳಿ ಗ್ರಾಮದ ಗುತ್ತಿಗೆದಾರ ಎಸ್.ಜಿ.ಪುಟ್ಟಸ್ವಾಮಿ (65) ಭಾನುವಾರ ರಾತ್ರಿ ನಿಧನರಾದರು.

ಪತ್ನಿ ಹಾಗು ಮಗನನ್ನು ಅಗಲಿದ್ದಾರೆ. ಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಪುಟ್ಟಸ್ವಾಮಿ ನಿಧನಕ್ಕೆ ತಾಲ್ಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸಂತಾಪ ಸೂಚಿಸಿದೆ.

## ಬಿಜೆಪಿ ವಿರುದ್ಧ ಕುಮಾರಸ್ವಾಮಿ ಹೋರಾಟ

» ಮೊದಲನೇ ಪುಟದಿಂದ

ಹೊಂದಿರುವ ಭೂಮಿಯಲ್ಲಿಯೇ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಬೇಕು. ಇದು ರಾಜ್ಯದ ಎಲ್ಲಾ ಭೂ ಮಾಲೀಕರಿಗೂ ಅನ್ವಯವಾಗಬೇಕೆಂದರು.

ಫಲಾನುಭವಿಗಳ ಭಾವಚಿತ್ರ ಸೇರಿ ಎಲ್ಲಾ ಅಗತ್ಯ ವಿವರಗಳನ್ನು ಒಳಗೊಂಡ ಸೂಕ್ತ ದಾಖಲೆ ಗಳನ್ನು ನೀಡಲು ನಾವು ವ್ಯವಸ್ಥೆ ಮಾಡುತ್ತಿದ್ದೇವೆ. ದಾಖಲೆಗಳು ಎಂದರೆ ಎಲ್ಲವೂ ಕಾನೂನು ಬದ್ಧವಾಗಿ ಮಾನ್ಯವಾಗಿರ ಬೇಕೆಂಬುದು ನನ್ನ ಉದ್ದೇಶ. ಬಿ ಖಾತಾದಿಂದ ಎ ಖಾತಾಗೆ ಪರಿ ವರ್ತಿಸುವಾಗಲೂ ಕಾನೂನು ಬದ್ಧತೆ ಇರಬೇಕು. ಬೋಗಸ್ ನೋಂದಣಿ ಇದ್ದರೆ ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದರು.

ಕಾನೂನಿನ ಚೌಕಟ್ಟಿನೊಳಗೆ ಅವರಿಗೆ ಸೂಕ್ತ ದಾಖಲೆಗಳನ್ನು ಒದಗಿಸಲು ನಾವು ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ ಭವಿಷ್ಯದಲ್ಲಿ ಅವರ ಆಸ್ತಿ ವರ್ಗಾವಣೆ ಮಾಡಬೇಕಾಗಬಹುದು, ಸಾಲ ಪಡೆಯಬೇಕಾಗಬಹುದು ಅಥವಾ ಕುಟುಂಬದ ಸದಸ್ಯರ ನಡುವೆ ಆಸ್ತಿಯನ್ನು ಹಂಚಿಕೆ ಮಾಡಬೇಕಾಗಬಹುದು. ಇಂತಹ ಹಲವು ಸಾಧ್ಯತೆಗಳಿವೆ. ಸರ್ಕಾರವು ಅವರ ಹಕ್ಕುಗಳು ಮತ್ತು ಆಸ್ತಿಗಳು ಸುರಕ್ಷಿತವಾಗಿರುವು ದನ್ನು ಖಚಿತಪಡಿಸಿಕೊಳ್ಳಬೇಕು. ಕೃಷ್ಣ ಬೈರೇಗೌಡ ಅವರು ಕಂದಾಯ ಸಚಿವರಾಗಿದ್ದಾಗ, ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ಆರಂಭವಾಗಿ ಈ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿದೆ ಎಂದರು.

## ಸಿಂಧೂ ನದಿ ನೀರು ಹಂಚಿಕೆ

### ಮಧ್ಯಸ್ಥಿಕೆ ನ್ಯಾಯಾಲಯದ ತೀರ್ಪು ತಿರಸ್ಕರಿಸಿದ ಭಾರತ

• ಪ್ರಜೋದಯ ವರದಿ

**ನವದೆಹಲಿ:** ಪಾಕಿಸ್ತಾನದೊಂದಿಗಿನ ರಾಜತಾಂತ್ರಿಕ ಉದ್ವಿಗ್ನತೆಯ ಹಿನ್ನೆಲೆ ಯಲ್ಲಿ ಅಮಾನತಿನಲ್ಲಿಟ್ಟಿದ್ದ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದವನ್ನು ಎತ್ತಿಹಿಡಿದ ಶಾಶ್ವತ ಮಧ್ಯಸ್ಥಿಕೆ ನ್ಯಾಯಾಲಯದ (ಸಿಓಎ) ಆದೇಶವನ್ನು ಭಾರತ ಸೋಮವಾರ ಸಂಪೂರ್ಣವಾಗಿ ತಿರಸ್ಕರಿಸಿದೆ.

ದಿ ಹೇಗ್ ಮೂಲದ ನ್ಯಾಯಾಲ ಯದ ತೀರ್ಪಿಗೆ ಪ್ರತಿಕ್ರಿಯಿಸಿದ ಭಾರತೀಯ ವಿದೇಶಾಂಗ ಸಚಿವಾಲ ಯವು, ಸಿಂಧೂ ನದಿ ನೀರು ಹಂಚಿಕೆ ಒಪ್ಪಂದವನ್ನು ಅಮಾನತಿನಲ್ಲಿಡುವ ಭಾರತದ ನಿರ್ಧಾರವು ಜಾರಿಯಲ್ಲೇ ಇರುತ್ತದೆಂದು ಸ್ಪಷ್ಟಪಡಿಸಿದೆ.

2025ರ ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ಬಳಿಕ ಪಾಕಿಸ್ತಾನದ ವಿರುದ್ಧ ಭಾರತವು ಹಲವು ದಂಡ ನಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಉಭಯ ರಾಷ್ಟ್ರಗಳ ನಡುವೆ ನಡೆದಿದ್ದ ಸಿಂಧೂ ನದಿ ನೀರು ಒಪ್ಪಂದವನ್ನು ಅಮಾನತಿ ನಲ್ಲಿರಿಸಿದೆ. ಸಿಂಧೂ ನದಿ ಹಾಗೂ ಅವುಗಳ ಉಪನದಿಗಳ ನೀರು ಹಂಚಿಕೆ ಹಾಗೂ ಬಳಕೆಗೆ ಸಂಬಂಧಿಸಿ 1960ರಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಒಪ್ಪಂದ ನಡೆದಿತ್ತು. ಭಾರತವು ಸಿಂಧೂ ನದಿ ನೀರು ಒಪ್ಪಂದವನ್ನು ಅಮಾನತಿನಲ್ಲಿಡುವು ದರ ಜೊತೆಗೆ, ಅಟ್ಟಾರಿ ಯಲ್ಲಿನ ಚೆಕ್‌ಪೋಸ್ಟ್ ಮುಚ್ಚುವುದು, ವೀಸಾಗ ಳನ್ನು ನಿರ್ಬಂಧಿಸುವುದು ಮತ್ತು ಆಯಾ ರಾಯಭಾರ ಕಚೇರಿಗಳಲ್ಲಿ ರಾಜ ತಾಂತ್ರಿಕ ಮತ್ತು ಅಧಿಕೃತ ಸಿಬ್ಬಂದಿ ಸಂಖ್ಯೆಯನ್ನು ಕಡಿತ ಗೊಳಿ ಸುವುದು ಸೇರಿ ಹಲವು ರಾಜತಾಂತ್ರಿಕ ಕ್ರಮ ಗಳನ್ನು ಕೈಗೊಂಡಿತ್ತು.

## ರಸ್ತೆ, ಸಮುದಾಯ ಭವನ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮಾರಿಗುಡಿ ಕೊಪ್ಪಲು ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದ ರಸ್ತೆ ಹಾಗು ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮದ ರಸ್ತೆ ಅಭಿವೃದ್ಧಿಗೆ 10 ಲಕ್ಷ ರೂ. ಹಾಗು ಸಮುದಾಯ ಭವನ ನಿರ್ಮಾಣಕ್ಕೆ 5 ಲಕ್ಷ ರೂ. ಅನುದಾನ ಒದಗಿಸಲಾಗಿದೆ. ಗ್ರಾಮಸ್ಥರ ಬಹು ದಿನಗಳ ಬೇಡಿಕೆಯನ್ನು ಪರಿಗಣಿಸಿ ಅಗತ್ಯ ಅನುದಾನ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮಕ್ಕೆ ಮತ್ತಷ್ಟು ಅನುದಾನ ಕಲ್ಪಿಸಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಗ್ರಾಮದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಜನರ ಬೇಡಿಕೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದರು. ಸ್ಥಳೀಯ ಮುಖಂಡರು, ಪಕ್ಷದ ಕಾರ್ಯಕರ್ತರು ಹಾಗು ಗ್ರಾಮಸ್ಥರು ಉಪಸ್ಥಿತರಿದ್ದರು.

## ದೇವಾಲಯದಲ್ಲಿ ಆಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬೀಗ ಮುರಿದು ದೇವರ ವಿಗ್ರಹದ ಮೇಲಿದ್ದ ಸುಮಾರು 14.25 ಲ. ರೂ. ಮೌಲ್ಯದ ಚಿನ್ನ ಹಾಗು ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಚಿಟ್ಟನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶ್ರೀ ಶಂಕರೇಶ್ವರ ಸ್ವಾಮಿ ದೇವಾಲಯದಲ್ಲಿ ಆ.29ರ ರಾತ್ರಿ ಕಳ್ಳತನ ನಡೆದಿದೆ. ಬೆಳಿಗ್ಗೆ ಅರ್ಚಕರು ಪೂಜೆಗೆಂದು ಹೋದಾಗ ಬಾಗಿಲಿನ ಬೀಗ ಮುರಿದಿರುವುದನ್ನು ಕಂಡಿದ್ದಾರೆ. ಭಕ್ತಾಧಿಗಳು ಕೊಟ್ಟಿದ್ದ ಬೆಳ್ಳಿಯ 40 ಛತ್ರಿ, 1 ಬೆಳ್ಳಿ ಹಣೆಪಟ್ಟಿ, 3 ಬೆಳ್ಳಿಯ ನಾಗಾಭರಣ, 3 ಬೆಳ್ಳಿ ಲಿಂಗದ ಕಾಯಿ, 2 ಬೆಳ್ಳಿಯ ನರಿಗೆ, 2 ಬೆಳ್ಳಿಯ ಗಿಳಿ, 2 ಬೆಳ್ಳಿಯ ನಿಂಬೆಹಣ್ಣು, 2 ಬೆಳ್ಳಿಯ ಕೋಡಣಸು, 1 ಬೆಳ್ಳಿ ಮುಖಭಾವ, ಪಾರ್ವತಿ ದೇವರ ಮೂರ್ತಿ ಮೇಲಿದ್ದ 1 ಚಿನ್ನದ ಮಂಗಲ್ಯ ಸರ, 2 ಕಾಸು ಹಾಗು 10 ಚಿನ್ನದ ಗುಂಡು ಕಳುವಾಗಿದೆ. ಒಟ್ಟು 35 ಗ್ರಾಂ ತೂಕದ ಚಿನ್ನದ ಆಭರಣ ಕಳುವಾಗಿದೆ. ಅದೇ ದಿನ ಸಮೀಪದ ಚೌಡಮ್ಮ ದೇವಾಲಯದಲ್ಲೂ 1 ಚಿನ್ನದ ಮಾಂಗಲ್ಯ ಸರ, ಚಿನ್ನದ 2 ಕಾಸು, ಚಿನ್ನದ 2 ಗುಂಡು ಕಳುವಾಗಿದೆ. 2 ದೇವಸ್ಥಾನದ ಹುಂಡಿಗಳನ್ನು ಗ್ರಾಮದ ಗಂಗಾಧರಪ್ಪ ಅವರ ಜಮೀನಿನಲ್ಲಿ ಒಡೆದು ಅದರಲ್ಲಿದ್ದ ಹಣ ವನ್ನು ಕದ್ದಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 4.95 ಲ. ರೂ. ಬೆಲೆಯ ಚಿನ್ನಾಭರಣ ಕಳವು

**ಅರಸೀಕೆರೆ:** ಮನೆಯ ಬೀಗ ಹಾಕದೆ ಹೊರ ಹೋಗಿದ್ದನ್ನು ಅರಿತ ಕಳ್ಳರು ಹಾಡ ಹಗಲೇ ಒಳಗೆ ನುಗ್ಗಿ ಬೀರುವಿನಲ್ಲಿಟ್ಟಿದ್ದ ಅಂದಾಜು 4.95 ಲ.ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಬ್ಯಾಡರಹಳ್ಳಿಯಲ್ಲಿ ನಡೆದಿದೆ.

ಮನೆ ಮಾಲೀಕ ಬಿ.ಮದನ್ ಅವರು ಆ.29ರಂದು ಕೆಲಸಕ್ಕೆ ತೆರಳಿದ್ದರು. ತಾಯಿ ಕಮಲ ಅವರು ಮನೆ ಬೀಗ ಹಾಕದೆ ಚಿಲಕ ಮಾತ್ರ ಹಾಕಿ ಹತ್ತಿರದ ಪರಿಚಯಸ್ಥರ ಮನೆಗೆ ತೆರಳಿದ್ದರು. ಸಂಜೆ 5 ಗಂಟೆಗೆ ಪಾನ್ ಕಾರ್ಡ್ ಅನ್ನು ಬೀರುವಿನಲ್ಲಿಡಲು ಹೋದಾಗ ಬಾಗಿಲು ತೆರೆದಿರುವುದು ತಿಳಿದಿದೆ. 1 ಲಾಂಗ್ ನೆಕ್ಲೇಸ್ (30 ಗ್ರಾಂ), ಒಂದು ಶಾರ್ಟ್ ನೆಕ್ಲೇಸ್ (15 ಗ್ರಾಂ), ಒಂದು ಕೊರಳಿನ ಸರ (12 ಗ್ರಾಂ), 2 ಕೈ ಬಳೆಗಳು (20 ಗ್ರಾಂ), ಕಿವಿ ಓಲೆಗಳು ಒಂದು ಜೊತೆ (4 ಗ್ರಾಂ), ಒಂದು ಗುಂಡಿನ ಸರ (5 ಗ್ರಾಂ) ಸೇರಿ ಒಟ್ಟು 86 ಗ್ರಾಂ ತೂಕದ ಆಭರಣ ಕಳುವಾಗಿದೆ.

## ನಾಳೆ ಮಹಿಳಾ ಸರ್ಕಾರಿ ನೌಕರರ ಸಂಘ ಉದ್ಘಾಟನೆ



• ಪ್ರಜೋದಯ ವರದಿ

**ಹಾಸನ:** ಮಹಿಳಾ ನೌಕರರ ಹಕ್ಕು, ಹಿತಾಸಕ್ತಿ ಹಾಗು ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶ ದಿಂದ ಅಸ್ತಿತ್ವ ಪಡೆದಿರುವ ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕ ಉದ್ಘಾಟನೆ, ಪದಾಧಿಕಾರಿಗಳ ಪದ ಗ್ರಹಣ ಹಾಗು ಕಾನೂನು ಜಾಗೃತಿ- ಆರೋಗ್ಯ ಅರಿವು ಕಾರ್ಯಕ್ರಮ ವನ್ನು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.2ರ ಬುಧವಾರ ಬೆಳಿಗ್ಗೆ 9.30ಕ್ಕೆ ಏರ್ಪಡಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷೆ ಕೆ.ವೀಣಾ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸೇವಾ ನಿಯಮ ಕುರಿತು ಗೊಂದಲ, ಕಾನೂನು ಹಕ್ಕುಗಳು ಹಾಗು ಆರೋಗ್ಯದ ವಿಚಾರ ದಲ್ಲಿ ಅರಿವು ಹೊಂದುವುದು ಅಗತ್ಯವಾಗಿದೆ. ಅದಕ್ಕಾಗಿ ಸಂಘ ರಚಿಸಲಾಗಿದೆ. ರಾಜ್ಯ ಸಂಘದ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲಿದೆ ಎಂದರು.

ಸಂಘದ ಮೂಲಕ ಮಹಿಳಾ ನೌಕರರಿಗೆ ಅಗತ್ಯ ಮಾರ್ಗದರ್ಶನ ಹಾಗು ನೆರವು ಒದಗಿಸುವ ಉದ್ದೇಶ ಹೊಂದಲಾಗಿದೆ. ಎಲ್ಲಾ ತಾಲ್ಲೂಕುಗಳಲ್ಲೂ ಸಂಘದ ಘಟಕ ರಚಿಸಲಾಗಿದ್ದು, ಮಹಿಳಾ ನೌಕರರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದೆಂದರು.

ಜಿಲ್ಲಾಧಿಕಾರಿಕೆ.ಎಸ್.ಲತಾ ಕುಮಾರಿ ಕಾರ್ಯಕ್ರಮ ಉದ್ಘಾಟಿಸು ವರು. ರಾಜ್ಯಾಧ್ಯಕ್ಷೆ ಡಾ.ಸಿ.ವಿ.ಶೈಲಜಾ ಪ್ರಾಸ್ತಾವಿಕ ನುಡಿ ಆಡಲಿದ್ದಾರೆ. ಜಿಲ್ಲಾಧ್ಯಕ್ಷೆ ಕೆ.ವೀಣಾ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಸೇರಿ ಜಿಲ್ಲೆಯ ಎಲ್ಲಾ ಶಾಸಕರು ಭಾಗಿಯಾ ಗುವರು. ಕಾನೂನು ಜಾಗೃತಿ ಕುರಿತು ವಕೀಲೆ ಗಿರಿಜಾಂಬಿಕೆ, ಆರೋಗ್ಯ ಸಮಸ್ಯೆ ಕುರಿತು ಹಿಮ್ಸ್‌ನ ಡಾ|| ಅನುಪಮಾ ಉಪನ್ಯಾಸ ನೀಡಲಿದ್ದಾ ರೆಂದರು. ಸಂಘದ ಖಜಾಂಚಿ ಪುಷ್ಪ, ಉಪಾಧ್ಯಕ್ಷೆ ಬಿ.ಎಂ.ಶೃತಿ, ಕ್ರೀಡಾ ಕಾರ್ಯದರ್ಶಿ ಯಶೋಧ ಇದ್ದರು.

## ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅಧಿಕ

• ಪ್ರಜೋದಯ ವರದಿ




**ಅರೇಹಳ್ಳಿ:** ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗು ಶಿಸ್ತಿನ ಬೆಳವಣಿಗೆಯಲ್ಲಿ ಶಿಕ್ಷಕರಷ್ಟೇ ಪೋಷಕರ ಪಾತ್ರವೂ ಮಹತ್ವದ್ದಾಗಿದೆ ಎಂದು ಅನುಗ್ರಹ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವ್ಯವಸ್ಥಾಪಕ ಕಿರಣ್ ಮೆಲ್ವಿನ್ ಅವರು ಹೇಳಿದರು.

ಬೇಲೂರು ತಾಲ್ಲೂಕು ಅರೇಹಳ್ಳಿಯ ಅಂಬೇಡ್ಕರ್ ನಗರದಲ್ಲಿರುವ ಅನುಗ್ರಹ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ನಡೆದ ಶಿಕ್ಷಕ-ಪೋಷಕರ ಸಭೆಯಲ್ಲಿ ಮಾತನಾಡಿದ ಅವರು, ಮಕ್ಕಳು ಮೊಬೈಲ್ ಬಳಕೆಯಿಂದ ದೂರವಿದ್ದು, ಓದು ಹಾಗು ಇತರ ಸೃಜನಾತ್ಮಕ ಚಟುವಟಿಕೆ ಗಳತ್ತ ಗಮನಹರಿಸುವಂತೆ ಪೋಷಕರು ನೋಡಿಕೊಳ್ಳಬೇಕು. ಮಕ್ಕಳ ಮುಂದೆ ಪೋಷಕರು ಅಸಭ್ಯವಾಗಿ ವರ್ತಿಸಬಾರದು. ಮಕ್ಕಳಿಗೆ ಶಿಸ್ತು ಕಲಿಸುವ ಮೊದಲು ಪೋಷಕರು ತಮ್ಮಲ್ಲಿರುವ ಕೆಟ್ಟ ಹವ್ಯಾಸಗಳನ್ನು ದೂರ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಮಕ್ಕಳನ್ನು ಶಿಸ್ತಿನ ಸಿಪಾಯಿಗಳಂತೆ ರೂಪಿಸುವಲ್ಲಿ ಶಿಕ್ಷಕರು ಮತ್ತು ಪೋಷಕರು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಪಠ್ಯ ಚಟುವಟಿಕೆಗಳಿಗೆ ನೀಡುವಷ್ಟೇ ಮಹತ್ವ ವನ್ನು ಆಟೋಟ ಹಾಗು ಕ್ರೀಡಾ ಚಟುವಟಿಕೆಗಳಿಗೆ ನೀಡಬೇಕು. ಅದರಿಂದ ಮಕ್ಕಳ ದೈಹಿಕ ಹಾಗು ಮಾನಸಿಕ ಬೆಳವಣಿಗೆಗೆ ಸಹಕಾರಿ ಯಾಗುತ್ತದೆಂದರು.

ಮಕ್ಕಳ ಶೈಕ್ಷಣಿಕ ಪ್ರಗತಿ, ಶಿಸ್ತು ಹಾಗು ನಡವಳಿಕೆ ಕುರಿತು ಪೋಷಕರು ಶಿಕ್ಷಕರೊಂದಿಗೆ ನಿರಂತರವಾಗಿ ಚರ್ಚಿಸಬೇಕು. ಉತ್ತಮ ಭವಿಷ್ಯಕ್ಕಾಗಿ ಶಾಲೆ ಮತ್ತು ಮನೆ ಎರಡೂ ಒಂದೇ ದಿಕ್ಕಿನಲ್ಲಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದರು.

ಸಭೆಯಲ್ಲಿ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗು ಪೋಷಕರು ಉಪಸ್ಥಿತರಿದ್ದರು.

## ಮತದಾರರ ಪಟ್ಟಿ ಸೂಕ್ಷ್ಮವಾಗಿ ಪರಿಶೀಲಿಸಿ: ಸಂಸದ

• ಪ್ರಜೋದಯ ವರದಿ



**ಹಾಸನ:** ದುದ್ದ ಹಾಗು ಶಾಂತಿಗ್ರಾಮ ಹೋಬಳಿಗಳಲ್ಲಿ ಭಾರತ್ ಜೋಡೋ ಸಂಘಗಳ ಸ್ಥಾಪನೆ ಹಾಗು ಬಿಎಲ್ ಎ-2ಗೆ ಸಂಬಂಧಿಸಿದಂತೆ ಸಂಸದ ಶ್ರೇಯಸ್ ಪಟೇಲ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಹಾಗು ಕಾರ್ಯಕರ್ತರೊಂದಿಗೆ ಸೋಮವಾರ ಸಭೆ ನಡೆಯಿತು.

ಸಮಾಜದ ಎಲ್ಲಾ ವರ್ಗದ ಜನರನ್ನು ಒಗ್ಗೂಡಿಸುವುದು, ಜನರೊಂದಿಗೆ ನೇರ ಸಂಪರ್ಕ ಬೆಳೆಸುವುದು ಹಾಗು ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಳಮಟ್ಟದಲ್ಲಿ ಮತ್ತಷ್ಟು ಬಲಪಡಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ವೇಳೆ ಬಿಎಲ್‌ಎ-2ಗಳ ಜವಾಬ್ದಾರಿ ಹಾಗು ಕಾರ್ಯವೈಖರಿ ಕುರಿತು ಕಾರ್ಯಕರ್ತರಿಗೆ ಮಾಹಿತಿ ನೀಡಲಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಪ್ರತಿ ಬೂತ್ ನಲ್ಲಿಯೂ ಮತದಾರರ ಪಟ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅರ್ಹ ಮತದಾರರ ಹೆಸರುಗಳು ಪಟ್ಟಿಯಲ್ಲಿ ಇರುವು ದನ್ನು ಖಚಿತಪಡಿಸಿಕೊಳ್ಳಬೇಕು. ಪಟ್ಟಿಯಲ್ಲಿ ಅಗತ್ಯ ತಿದ್ದುಪಡಿಗಳಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆ ಮತ ದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಪಕ್ಷದ ಪ್ರತಿನಿಧಿಗಳು ಬಿಎಲ್‌ಒ ಗಳಿಗೆ ಸಹಕಾರ ನೀಡುವ ಮಹತ್ವದ ಜವಾಬ್ದಾರಿ ಹೊಂದಿದ್ದು, ಈ ನಿಟ್ಟಿನಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ತಿಳಿಸಿದರು.

ಪ್ರತಿ ಬೂತ್‌ನಲ್ಲಿ ಸಂಘಟನೆ, ಪ್ರತಿ ಮನೆಗೆ ಸಂಪರ್ಕ, ಪ್ರತಿಯೊಬ್ಬ ಮತದಾರನಿಗೂ ಗೌರವ ಎಂಬ ಆಶಯದೊಂದಿಗೆ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಪಕ್ಷದ ಸಂಘಟನೆ ತಳಮಟ್ಟದಲ್ಲಿ ಮತ್ತಷ್ಟು ಸದೃಢವಾಗಬೇಕು. ಕಾರ್ಯಕರ್ತರ ಪರಿಶ್ರಮ ಹಾಗೂ ಬದ್ಧತೆಯ ಮೂಲಕ ಜನರ ವಿಶ್ವಾಸವನ್ನು ಗಟ್ಟಿಗೊಳಿಸ ಬೇಕೆಂದು ಮುಖಂಡರು ಹೇಳಿದರು.

ಸಭೆಯಲ್ಲಿ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗು ಕಾರ್ಯಕರ್ತರು ಇತರರು ಉಪಸ್ಥಿತರಿದ್ದರು.

## ಮಗನಿಂದ ಕೊಲೆ ಬೆದರಿಕೆ: ರಕ್ಷಣೆಗೆ ವೃದ್ಧ ದಂಪತಿ ಮನವಿ




• ಪ್ರಜೋದಯ ವರದಿ

**ಹಾಸನ:** ಆಸ್ತಿಗಾಗಿ ಹಿರಿಯ ಪುತ್ರ ನಿರಂತರ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕುತ್ತಿದ್ದು ಇಳಿವಯಸ್ಸಿನಲ್ಲಿರುವ ನಮ್ಮನ್ನು ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಸಬೇಕೆಂದು ನಿಟ್ಟೂರು ಗ್ರಾಮದ ರೇವಣ್ಣಸಿದ್ದಪ್ಪ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ನನಗೆ 86 ವರ್ಷ ವಯಸ್ಸು, ಪತ್ನಿ ಜಯಮ್ಮ 76 ವರ್ಷದವರಾಗಿದ್ದು, ಕಳೆದ 6 ವರ್ಷಗಳಿಂದ ಪಾರ್ಶ್ವವಾಯು ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೂ ಮಕ್ಕಳು ನಮ್ಮನ್ನು ನೋಡಿಕೊಳ್ಳುತ್ತಿಲ್ಲ, ವೃದ್ಧಾಶ್ರಮಕ್ಕಾದರೂ ಕಳುಹಿಸಿದರೆ ನೆಮ್ಮದಿಯಿಂದ ಇರುತ್ತೇವೆಂದು ಕಣ್ಣೀರಿಟ್ಟರು.

ನಮಗೆ ಇಬ್ಬರು ಗಂಡು ಮಕ್ಕಳು ಹಾಗು ಒಬ್ಬಳು ಮಗಳಿದ್ದು, ಎಲ್ಲರೂ ಮದುವೆಯಾಗಿ ಚೆನ್ನಾಗಿದ್ದಾರೆ. ವೃದ್ಧಾಪ್ಯದಲ್ಲಿರುವ ನಮ್ಮನ್ನು ನೋಡಿಕೊಳ್ಳುತ್ತಿಲ್ಲ. ಅನಾರೋಗ್ಯ ನಡುವೆ ಜೀವನ ಸಾಗಿಸುವುದೇ ಕಷ್ಟವಾಗಿದೆ. ವಾಸಿಸುತ್ತಿರುವ ಮನೆಯೂ ಶಿಥಿಲವಾಗಿದೆ. ಪತ್ನಿಗೆ ಅಡುಗೆ ಮಾಡಲು ಶಕ್ತಿಯಿಲ್ಲ, ಹೋಟೆಲ್‌ನಿಂದ ತರೋಣ ಎಂದರೆ ಹಣವಿಲ್ಲ, ಊಟಕ್ಕೂ ಪರ ದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ, ಎಷ್ಟೋ ದಿನ ರಾತ್ರಿ ಹಸಿವಿನಿಂದಲೇ ಮಲಗಿದ್ದೇವೆಂದರು.

ನಮ್ಮನ್ನು ನೋಡಿಕೊಳ್ಳದ ಮಕ್ಕಳು, ನನ್ನ ಹೆಸರಿನಲ್ಲಿರುವ 2 ಎಕರೆ ಜಮೀನು ಪಾಲು ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ನಮಗಿಂತ ಅವರಿಗೆ ಆಸ್ತಿಯೇ ಮುಖ್ಯವಾಗಿದೆ. ಹಿರಿಯ ಮಗ ಕುಮಾರ ನಿತ್ಯ ಮದ್ಯದ ನಶೆಯಲ್ಲಿ ಹಲ್ಲೆ ಮಾಡುತ್ತಾನೆ. ಕಿರಿಯ ಮಗ ಚಂದ್ರಶೇಖರ್ ಕೆಎಸ್‌ಆರ್‌ಟಿಸಿ ನೌಕರನಾಗಿದ್ದು ಮನೆಗೆ ಬರುವುದಿಲ್ಲ, ವಯಸ್ಸಾಗಿರುವ ನನಗೆ ಏನು ಮಾಡ ಬೇಕೆಂದು ತೋಚುತ್ತಿಲ್ಲ. ಜೀವನ ನಿರ್ವಹಣೆಗೆ ಹಣದ ಅಗತ್ಯವಿದ್ದು, 20 ಗುಂಟೆ ಜಮೀನು ಮಾರಲು ಮುಂದಾಗಿದ್ದೇವೆ. ಅದಕ್ಕೂ ಮಗ ತೊಂದರೆ ಕೊಡುತ್ತಿದ್ದಾನೆ. ನಮ್ಮ ಮೇಲೆ ನಡೆದಿ ರುವ ಹಲ್ಲೆ ಖಂಡಿಸಿ ಗ್ರಾಮಾಂತರ ಠಾಣೆಗೆ ದೂರು ನೀಡಿದರೆ ಪೊಲೀಸರು ಕ್ರಮ ಜರುಗಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

## ಆಶ್ರಯ ನಿವೇಶನ ಹಕ್ಕು ಪತ್ರಕ್ಕಾಗಿ ಮನವಿ



• ಪ್ರಜೋದಯ ವರದಿ

**ಹಾಸನ:** ಆಶ್ರಯ ಯೋಜನೆಯಡಿ ನಿವೇಶನ ಮಂಜೂರಾಗಿದ್ದರೂ ಹಕ್ಕು ಪತ್ರ ನೀಡದೆ ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ಅರಕಲಗೂಡಿನ ಮಾಚಗೌಡನಹಳ್ಳಿ ನಿವಾಸಿಗಳು ರೈತ ಸಂಘದ ನೇತೃತ್ವದಲ್ಲಿ ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು ಅವರು ಮಾತನಾಡಿ, ಮಾಚಗೌಡನ ಹಳ್ಳಿಯ 36 ಕುಟುಂಬಗಳು ಆಶ್ರಯ ಯೋಜನೆಯಡಿ ನಿವೇಶನಕ್ಕಾಗಿ ಅರ್ಹರಾಗಿದ್ದು, ಈ ಕುರಿತು ಹಲವು ತಿಂಗಳಿನಿಂದ ಜಿಲ್ಲಾಡಳಿತ ಹಾಗು ತಾಲ್ಲೂಕು ಆಡಳಿತದ ಗಮನಕ್ಕೆ ತಂದರೂ ಕ್ರಮ ಕೈಗೊಂಡಿಲ್ಲವೆಂದು ದೂರಿದರು.

ಮೂರು ತಿಂಗಳ ಹಿಂದೆ ಅಧಿಕಾರಿಗಳ ಸಭೆ ನಡೆಸಿ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿರುವ ಬಗ್ಗೆ ಪರಿಶೀಲನೆ ನಡೆಸಿ ಅರಕಲಗೂಡು ತಹಶೀಲ್ದಾರ್ ಕಚೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ನಿವೇಶನ ಹಕ್ಕುಪತ್ರ ನೀಡುವುದಾಗಿ ಭರವಸೆ ನೀಡಲಾಗಿತ್ತು. ಆದರೆ, ಬಳಿಕ ಎಸ್‌ಐಆರ್ ಸೇರಿ ವಿವಿಧ ಕಾರಣಗಳನ್ನು ಮುಂದಿಟ್ಟುಕೊಂಡು ಕಾಲಾವಕಾಶ ಕೇಳಲಾಗಿದ್ದು, ಈಗಾಗಲೇ ಮೂರು ತಿಂಗಳು ಕಳೆದರೂ ಸಮಸ್ಯೆ ಬಗೆಹರಿದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚೆಗೆ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿದಾಗ ಸೋಮವಾರ ಬರುವಂತೆ ಸೂಚಿಸಿ ಅಪರ ಜಿಲ್ಲಾಧಿಕಾರಿ ಮೂಲಕ ಸಮಸ್ಯೆ ಪರಿಶೀಲಿಸಿ ಸೂಕ್ತ ನ್ಯಾಯ ಒದಗಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದರು.

ಹಾಸನದ ಬೀರನಹಳ್ಳಿ ಕೆರೆ ಬಳಿ ಇದ್ದ ಮನೆಗಳನ್ನು ತೆರವುಗೊಳಿಸಿ ಕೃಷ್ಣಾನಗರದಲ್ಲಿ ವಾಸಕ್ಕೆ ವ್ಯವಸ್ಥೆ ಮಾಡ ಲಾಗಿತ್ತು. ಬಳಿಕ ತೆರವುಗೊಳಿಸಿದ ಜಾಗ ವನ್ನು ಗುರುತಿಸಿ ಉದ್ಯಾನವನ ನಿರ್ಮಾಣ ಮಾಡಲಾಗಿದೆ. ಆದರೆ, ಅಲ್ಲಿದ್ದ ಬಡ ಕುಟುಂಬಗಳಿಗೆ ಪರ್ಯಾಯ ನಿವೇಶನ ಅಥವಾ ಹಕ್ಕು ಪತ್ರ ನೀಡಿಲ್ಲವೆಂದು ದೂರಿದರು. ರೈತ ಸಂಘದ ದಾಸೇಗೌಡ, ಲಕ್ಷ್ಮಣ್, ಕಾಂತರಾಜು, ಸಾಕಮ್ಮ, ಸಮಿವುಲ್ಲಾ ಇತರರಿದ್ದರು.

## ಅಟ್ಟಾವರ ಸರ್ಕಾರಿ ಶಾಲೆಗೆ ಶ್ರೇಯಸ್ ಪಟೇಲ್ ಭೇಟಿ



**ಹಾಸನ:** ತಾಲ್ಲೂಕಿನ ದುದ್ದ ಹೋಬಳಿಯ ಅಟ್ಟಾವರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಂಸದ ಶ್ರೇಯಸ್ ಪಟೇಲ್ ಅವರು ಸೋಮವಾರ ದಿಢೀರ್ ಭೇಟಿ ನೀಡಿ ಶಾಲೆಯ ಶೈಕ್ಷಣಿಕ ವಾತಾವರಣ ಹಾಗು ಮೂಲಸೌಕರ್ಯ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಶಾಲೆಯ ತರಗತಿ ಕೊಠಡಿಗಳು, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ವಿದ್ಯುತ್ ಸೇರಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳ ಕುರಿತು ಸಂಸದರು ಶಿಕ್ಷಕರು ಹಾಗು ಸ್ಥಳೀಯರಿಂದ ಮಾಹಿತಿ ಪಡೆದು ಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಶಾಲೆಯ ಲ್ಲಿನ ಶೈಕ್ಷಣಿಕ ಚಟುವಟಿಕೆಗಳು ಹಾಗು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳ ಬಗ್ಗೆಯೂ ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸುರಕ್ಷಿತ ಹಾಗೂ ಗುಣಮಟ್ಟದ ಕಲಿಕಾ ವಾತಾ ವರಣ ಕಲ್ಪಿಸುವುದು ಅಗತ್ಯ. ಶಾಲೆಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮಕ್ಕಳ ಭವಿಷ್ಯವೇ ನಮ್ಮ ಭವಿಷ್ಯ. ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಸದಾ ನಿಮ್ಮೊಂದಿಗೆ, ನಿಮ್ಮ ಪರವಾಗಿ ಕಾರ್ಯನಿರ್ವಹಿಸುತ್ತೇನೆಂದು ಭರವಸೆ ನೀಡಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019